


ಧರ್ಮಗುರು ಟೋನಿ ಅಲಾಮೊ | ಅಲಾಮೊ ಕ್ರೈಸ್ತ ರಾಷ್ಟ್ರ | ಸಂಪುಟ 06000



*ಪ್ಯಾಸ್ಟರ್ ಟೋನಿ ಅಲಾಮೊ*
*ಫೋಟೊ 1986*

# ಟೋನಿ ಅಲಾಮೊ ಅವರ ಸಾಕ್ಷ್ಯ

## ಒಣಗಿದ ಎಲುಬುಗಳು

**ಟೋನಿ ಅಲಾಮೊ**
**ಅವರಿಂದ**

**ಹಳೆ ಒಡಂಬಡಿಕೆಯ ಪ್ರವಾದಿಯಾದ ಯೆಹೆಜ್ಕೇಲನಿಗೆ ದೇವರಿಂದ ಒಂದು ಅಲೌಕಿಕ ದರ್ಶನವನ್ನು ಕಳುಹಿಸಲಾಯಿತು. ಅವರು ಇಸ್ರೇಲ್ ಮತ್ತು ಪ್ರಪಂಚದ ಆಧ್ಯಾತ್ಮಿಕ ಮೃತ ಸ್ಥಿತಿಯನ್ನು ಪ್ರತಿನಿಧಿಸಿದ ಒಣಗಿದ ಎಲುಬುಗಳ ಕಣಿವೆಯನ್ನು ನೋಡಿದರು. ಆ ಅಲೌಕಿಕ ದರ್ಶನವು ಕ್ರಿಸ್ತರ ಮೊದಲ ಬರುವಿಕೆ, ಸುವಾರ್ತೆಯ ಅವರ ಬೋಧನೆ, ಮತ್ತು ಪರಿಣಾಮ, "ದೇವರ ಪದ"ವನ್ನು[1] ನಂಬುವ ಎಲ್ಲರಿಗೂ ನಿತ್ಯಜೀವಕ್ಕಾಗಿ ಸಾವಿನಿಂದ ಮೊದಲ ಪುನರುತ್ಥಾನಗಳ ಭವಿಷ್ಯ ನುಡಿಯಿತು.**

**"ನರಪುತ್ರನೇ, ಈ ಎಲುಬುಗಳಿಗೆ ಜೀವವು ಬರಬಹುದೋ?" (ಆಧ್ಯಾತ್ಮಿಕವಾಗಿ ಸತ್ತಿರುವ ಇವರು ಬದುಕಬಹುದೆ) ಎಂದು ದೇವರು ಯೆಹೆಜ್ಕೇಲನಿಗೆ ಹೇಳಿದರು. ಯೆಹೆಜ್ಕೇಲನು, "ಕರ್ತನಾದ ಯೆಹೋವನೇ, ನೀನೇ ಬಲ್ಲೆ" ಎಂದು ಹೇಳಿದನು.[2]**

ದೇವರು ಪುನಃ ಪ್ರವಾದಿಗೆ ಹೀಗೆಂದು ಹೇಳಿದರು, "ನೀನು ಎಲುಬುಗಳ ಮೇಲೆ ಧ್ವನಿಯನ್ನು ಹರಡಿ ಅದಕ್ಕೆ ಈ ದೈವೋಕ್ತಿಯನ್ನು ನುಡಿ - ಒಣಗಿದ ಎಲುಬುಗಳೇ, ಯೆಹೋವನ ವಾಕ್ಯವನ್ನು ಕೇಳಿರಿ. ಕರ್ತನಾದ ಯೆಹೋವನು ನಿಮಗೆ ಹೀಗೆ ಹೇಳುತ್ತಾನೆ - ಇಗೋ, ನಾನು ನಿಮ್ಮೊಳಗೆ ಶ್ವಾಸವನ್ನು ಹೊಗಿಸುವೆನು, ನೀವು ಬದುಕುವಿರಿ."[3]

ತಾನು ಒಂದು ರಾಷ್ಟ್ರವಾಗಿ ಸಂಪೂರ್ಣವಾಗಿ ಕಳೆದುಹೋಗಿದ್ದೇನೆಂಬುದು ಇಸ್ರೇಲಿಗೆ ತಿಳಿದಿತ್ತು.[4] ಇಂದಿಗೂ ಅವರು ಸರಿಪಡಿಸಲಾಗದಷ್ಟು ವಿಭಜಿತರಾಗಿದ್ದಾರೆ. ಆದರೆ ಪಾಪ ಮಾಡುವುದನ್ನು ನಿಲ್ಲಿಸದ ಮೊದಲ ಇಸ್ರೇಲಿಗಿಂತ ಹೆಚ್ಚು ಶ್ರೇಷ್ಠವಾದ ಮತ್ತೊಂದು ರಾಷ್ಟ್ರವನ್ನು ನಿರ್ಮಿಸುವುದಾಗಿ ದೇವರು ಯೆಹೆಜ್ಕೇಲನಿಗೆ ಹೇಳಿದರು. ಆ ಎರಡನೇ ಇಸ್ರೇಲ್ ವಿಶ್ವದ ಪ್ರತಿಯೊಂದು ದೇಶದ ಜನರಾಗಿರುವರು,[5] ಆಯ್ದ ಯೆಹೂದ್ಯರಲ್ಲಿ ಉಳಿದವರು ಮತ್ತು ಬಹುಸಂಖ್ಯೆಯಲ್ಲಿ ನಿಜವಾದ ದ್ರಾಕ್ಷಾಬಳ್ಳಿಗೆ (ಕ್ರಿಸ್ತರು) ಕಸಿಕಟ್ಟಲ್ಪಟ್ಟ ಅನ್ಯಜನರಾಗಿರುವರು.[6] ಅದು ಪಾಪದಿಂದ ತುಂಬಿದ ಮರಣಕರವಾದ ಬದುಕಿನಿಂದ ನಿತ್ಯಜೀವನಕ್ಕೆ ಪುನರುತ್ಥಾನಗೊಂಡ ಜನರನ್ನೊಳಗೊಂಡ ಶ್ರೇಷ್ಠ ಪವಿತ್ರ ದೇಶವಾಗಿರುವುದು..[7] ಅವರು ಎಂದೂ ದೇವರ ವಿರುದ್ಧ ವಿಭಜಿತರಾಗಿರಲಾರರು. ಇದು ಕ್ರಿಸ್ತರ ಪುನರುತ್ಥಾನ ಶಕ್ತಿಯ ಮೂಲಕ ಆದ ಮೊದಲ ಪುನರುತ್ಥಾನವಾಗಿತ್ತು.[8]

1964ರಲ್ಲಿ, ಕ್ರಿಸ್ತರ ಮೂಲಕ ನನ್ನ ಮೊದಲ ಪುನರುತ್ಥಾನಕ್ಕಿಂತ ಮೊದಲು, ನಾನು, ಟೋನಿ ಅಲಾಮೊ ಎಂದು ಪರಿಚಿತನಾದ ಬರ್ನಿ ಹಾಫ್‌ಮನ್, ಪಾಪ ಮಾಡುವುದಕ್ಕೆ ಮತ್ತು ಅನಾಚಾರಕ್ಕೆ ಪ್ರಸಿದ್ಧನಾಗಿದ್ದೆನು ಮತ್ತು ದೇವರ ಬಗ್ಗೆ ಯಾವುದೇ ಜ್ಞಾನವಿರಲಿಲ್ಲ. ದೇವರ ಅಸ್ತಿತ್ವದ ಬಗ್ಗೆ ನನಗೆ ಯಾವುದೇ ಕಲ್ಪನೆ ಇರಲಿಲ್ಲ. ದೇವರ ಪದಗಳು ನನಗೆ ಕಥೆಗಳು ಮತ್ತು ಕಟ್ಟುಕಥೆಗಳಾಗಿದ್ದವು, ಜನರು ದೇವರನ್ನು ಅಥವಾ ಆತನ ಮಗನನ್ನು ಹೇಗೆ ನಂಬಬಹುದು ಎಂದು ನನಗೆ ಅರ್ಥವಾಗುತ್ತಿರಲಿಲ್ಲ. ತಾವು ದೇವರನ್ನು ನಂಬುವುದಾಗಿ ಹೇಳಿದವರನ್ನು ನಂಬಲು ನನಗೆ ಸಾಧ್ಯವಾಗುತ್ತಿರಲಿಲ್ಲ, ಏಕೆಂದರೆ ಅವರು ಆಷಾಢಭೂತಿಗಳಾಗಿದ್ದರು. ಅವರು ನನ್ನಷ್ಟೆ, ಅಥವಾ ನನಗಿಂತಲೂ ಹೆಚ್ಚು, ಪಾಪ ಮಾಡುತ್ತಿದ್ದರು. ನನಗೆ ಗೊತ್ತು, ಏಕೆಂದರೆ ನಾನು ಅವರ ಜೊತೆ ತಿರುಗಾಡುತ್ತಿದ್ದೆ. ನಾವೆಲ್ಲರೂ ಸತ್ತುಹೋದ, ಒಣಗಿದ ಎಲುಬುಗಳ ಒಂದು ರಾಶಿಯಾಗಿದ್ದೆವು. ಯಾರಾದರೂ ನನ್ನನ್ನು ಕ್ರೈಸ್ತಮತಕ್ಕೆ ಮತಾಂತರಿಸಲು ಪ್ರಯತ್ನಿಸಿದರೆ ನನಗೆ ಕೋಪ ಬರುತ್ತಿತ್ತು, ಏಕೆಂದರೆ ನನಗೆ ಬೈಬಲ್, ಸಮಯವನ್ನು ಹಾಳುಮಾಡುವುದಕ್ಕೆ ಸಮಾನವಾಗಿತ್ತು. ನಾನು ಬದುಕುತ್ತಿದ್ದ ಬದುಕು ನನಗೆ ಆಟಗಳನ್ನಾಡಲು ಅಥವಾ ಕಲ್ಪಿತ ಕಥೆಗಳಿಗಾಗಿ ಸಮಯ ಕೊಡುತ್ತಿರಲಿಲ್ಲ.

ಮಾರಾಟ ಉದ್ಯಮದಲ್ಲಿ ನನ್ನನ್ನು #1 ಎಂದು ಪರಿಗಣಿಸಲಾಗುತ್ತಿತ್ತು. ಹಲವಾರು ವಿಶ್ವವಿಖ್ಯಾತ ಹಾಡುಗಾರರು ಮತ್ತು ನಟರ ಯಶಸ್ವಿ ವೃತ್ತಿಜೀವನಗಳಿಗೆ ಮಾತ್ರವಲ್ಲದೆ ಹಲವಾರು ಪ್ರಸಿದ್ಧ ಗೃಹಬಳಕೆ ಉತ್ಪನ್ನಗಳ ಯಶಸ್ವಿ ಪ್ರಚಾರಕ್ಕೆ ನಾನೇ ಕಾರಣನಾಗಿದ್ದೆ. ಆಗ ನನ್ನ ಅತ್ಯಂತ ಕೆಟ್ಟ ಕನಸು ಎಂದರೆ ನಾನು ಮತಾಂತರಗೊಂಡು ಬೀದಿಯ ಮೂಲೆಗಳಲ್ಲಿ ಯೇಸುವಿನ ಬಗ್ಗೆ ಸುವಾರ್ತೆಯ ಕರಪತ್ರಗಳನ್ನು ಹಂಚಿಕೊಂಡು, ಬೀದಿ ಅಲೆಯುವ ಪೋಕರಿಗಳ ಮಿಷನ್‌ನಲ್ಲಿ ವಾಸವಾಗಿದ್ದುಕೊಂಡು, ಸುವಾರ್ತೆಯನ್ನು ಬೋಧಿಸುತ್ತ, ಮತ್ತು ಹಸಿದ ಜನರಿಗೆ ಆಹಾರದ ಸಾಲುಗಳನ್ನು ಸಂಯೋಜಿಸುವುದಾಗಿತ್ತು.

60 ನೇ ಇಸವಿಯ ಮಧ್ಯ ಭಾಗದಲ್ಲಿ, ಜಗತ್ತು ನನಗೆ ಚೆನ್ನಾಗಿರುವಂತೆ ಕಾಣುತ್ತಿರಲಿಲ್ಲ. ನನಗೆ ಮಾದಕ ವಸ್ತುಗಳು ಅಥವಾ ಹಂದಿಯ ನೀತಿಗಳುಳ್ಳ ಹೊಲಸು ಜನರು ಇಷ್ಟವಿರಲಿಲ್ಲ. ಮತ್ತು ಹಿಪ್ಪಿ ಚಳುವಳಿಯು ಹಾಲಿವುಡ್, ಸನ್‌ಸೆಟ್ ಸ್ಟ್ರಿಪ್, ಮತ್ತು ಜಗತ್ತಿನ ಮೇಲೆ ಬೀರುತ್ತಿದ್ದ ಪ್ರಭಾವವನ್ನು ನಾನು ದ್ವೇಷಿಸುತ್ತಿದ್ದೆ. ನನ್ನ ಬಗ್ಗೆ ಹೇಳುವುದಾದರೆ, ನಾನೇನೂ ಸಂತನಾಗಿರಲಿಲ್ಲ. ಪಾಪಕ್ಕೆ ಸಂಬಂಧಿಸಿದ ಮಟ್ಟಿಗೆ, ಮಕ್ಕಳಿದ್ದ ಕುಟುಂಬಗಳೆದುರಲ್ಲಿ ತಮ್ಮ ಕೃತ್ಯಗಳನ್ನು ಪ್ರದರ್ಶಿಸದೆ ಇರುವವರೆಗೆ, ಜನರು ಏನು ಮಾಡುತ್ತಿದ್ದರು ಎಂಬುದರ ಬಗ್ಗೆ ನನಗೇನೂ ಚಿಂತೆ ಇರಲಿಲ್ಲ. ನನ್ನ ಮಟ್ಟಿಗೆ ಜಗತ್ತು ಮುಗಿದುಹೋಗಿತ್ತು, ಸತ್ತು ಹೋಗಿತ್ತು, ಒಣಗಿ ಹೋಗಿತ್ತು, ಅಸಹ್ಯವಾಗಿತ್ತು, ಮತ್ತು ನಿರಾಶಾದಾಯಕವಾಗಿತ್ತು.[9] ನಿಜವಾಗಿಯೂ ಯಾವುದಕ್ಕೂ ಯಾವುದೇ ಮೌಲ್ಯವಿರಲಿಲ್ಲ. ಈ ವಿಷಯ ಜಗತ್ತಿನ ಇತರ ಜನರಿಗೆ ಕೂಡ ನನ್ನಷ್ಟೇ ಚೆನ್ನಾಗಿ ತಿಳಿದಿತ್ತು ಎಂದು ನನಗನಿ-

*(ಪುಟ 2ರಲ್ಲಿ ಮುಂದುವರಿದಿದೆ)*

**1** ಯೆಹೆಜ್ಕೇಲನು 36:1, 4 **2** ಯೆಹೆಜ್ಕೇಲನು 37:3, ಮೂಲ ಇಬ್ರಿಯ **3** ಯೆಹೆಜ್ಕೇಲನು 37:4-5, ಮೂಲ ಅರಮಾಇಕ್ **4** ಯೆಹೆಜ್ಕೇಲನು 37:11 **5** ಆದಿಕಾಂಡ 17:4-16, 22:18, 26:4, 46:3, 48:19, 49:10, ವಿಮೋಚನಕಾಂಡ 19:6, 32:10, ಕೀರ್ತನೆಗಳು 22:27, ಯೆಶಾಯ 2:2, ಯೋಹಾನನು 11:51-52, ಅಪೋಸ್ತಲರ ಕೃತ್ಯಗಳು 10:34-35, ಎಫೆಸದವರಿಗೆ 1:10, ಇಬ್ರಿಯರಿಗೆ 8:8-12, 1 ಪೇತ್ರನು 2:9-10, ಪ್ರಕಟನೆ 5:9, 14:6 ಮತ್ತು ಇನ್ನೂ ಹಲವಾರು **6** ಯೋಹಾನನು 15:1, ರೋಮಾಪುರದವರಿಗೆ 11:17, 19, 23, 24, ಪ್ರಕಟನೆ 7:4 **7** 1 ಪೇತ್ರನು 2:9 **8** ರೋಮಾಪುರದವರಿಗೆ 15:12, 1 ಕೊರಿಂಥದವರಿಗೆ 15:15, 16, ಕೊಲೊಸ್ಸೆಯವರಿಗೆ 2:12, 3:1, 1 ಥೆಸಲೋನಿಕದವರಿಗೆ 4:16, ಪ್ರಕಟನೆ 20:5-6 **9** ಮತ್ತಾಯ 13:39, ಅಧ್ಯಾಯ 24, 1 ಕೊರಿಂಥದವರಿಗೆ 15:24, ಇಬ್ರಿಯರಿಗೆ 9:26, 1 ಪೇತ್ರನು 4:7

# ಟೋನಿ ಅಲಾಮೊ ಅವರ ಸಾಕ್ಷ್ಯ

*(ಪುಟ 1 ರಿಂದ ಮುಂದುವರಿದಿದೆ)*

ಸುತ್ತದೆ, ಮತ್ತು ಅದರ ನಿಜಸ್ಥಿತಿಯಿಂದ ಪಾರಾಗಲು ಪ್ರಯತ್ನಿಸಲು ಮಾದಕ ವಸ್ತುಗಳನ್ನು ಸೇವಿಸಲು ಆರಂಭಿಸಿದರು. ಚರ್ಚುಗಳು ಅಷಾಢಭೂತಿತನವನ್ನು ಪ್ರದರ್ಶಿಸುತ್ತಿದ್ದವು; ಎಲ್ಲರಿಗೂ ಅದೂ ತಿಳಿದಂತಿತ್ತು. ಸಂಪೂರ್ಣ ಜಗತ್ತು ಅದರ ಪಾಪಗಳು ಮತ್ತು ಅಪಚಾರಗಳಲ್ಲಿ ಸತ್ತುಹೋಗಿತ್ತು.[10] ಯೆಹೆಜ್ಕೇಲನು ನೋಡಿದಂತೆ ಜಗತ್ತು ಒಣಗಿದ ಎಲುಬುಗಳ ಒಂದು ಬೃಹತ್ ಕಣಿವೆಯಾಗಿತ್ತು.[11]

ನಾನು ಯೇಸುವನ್ನು ಒಂದು ಬೆವರ್ಲಿ ಹಿಲ್ಸ್ ಕಚೇರಿಯಲ್ಲಿ ಬಹಳ ಅಲೌಕಿಕವಾದ ಒಂದು ರೀತಿಯಲ್ಲಿ ಭೇಟಿಯಾದೆನು. ದೇವರು, ತಾನು ಮತ್ತು ತನ್ನ ಮಗ ನಿಜವಾಗಿಯೂ ಇದ್ದಾರೆ ಎಂಬುದನ್ನು ನನಗೆ ರುಜುವಾತುಪಡಿಸಿದಾಗ ನಾನು ಎಷ್ಟೇ ಭಯಭೀತನಾಗಿದ್ದರೂ ಎಷ್ಟು ಸಂತೋಷಗೊಂಡಿದ್ದೆ ಎಂದು ಬಹುಶಃ ಯಾರಿಗೂ ಕಲ್ಪನೆ ಮಾಡಲು ಸಾಧ್ಯವಿಲ್ಲ. ನಮ್ಮಲ್ಲಿ ಭಯಭಕ್ತಿ ಹುಟ್ಟಿಸುವ ಆತನ ಪವಿತ್ರಾತ್ಮವನ್ನು ಅನುಭವಿಸಲು ಮತ್ತು ಪದಗಳು ಹಿಂದೆ ಮುಂದೆ ಸಾಗಲು ನಾನೊಬ್ಬ ಶೋಧಕನೇನೋ ಎಂಬಂತೆ ನನ್ನ ದೇಹದ ಪ್ರತಿಯೊಂದು ಭಾಗದ ಮೂಲಕ ಆತನ ಶಕ್ತಿಯುತ ಧ್ವನಿಯು ಹಾದುಹೋಗುವುದನ್ನು ಕೇಳಲು ನನಗೆ ರೋಮಾಂಚನವಾಯಿತು. ಆತನ ಉಪಸ್ಥಿತಿ ದಿವ್ಯವಾಗಿತ್ತು ಮತ್ತು ಬೆಚ್ಚನೆ ಅನುಭವ ನೀಡಿತು. ಆತನ ಆತ್ಮವು ದೇವರ ಕೈಯ ಶಕ್ತಿಯುತ ಹಿಡಿತದಂತೆ ನನ್ನ ಮೇಲೆ ಗಾಢವಾದ ಪರಿಣಾಮ ಬೀರಿತು. ಮತ್ತು ಆತನ ಪದಗಳು, "ನಿನ್ನ ಕಾಲುಗಳ ಮೇಲೆ ನಿಂತು ಈ ಕೊಠಡಿಯೊಳಗೆ ಇರುವವರಿಗೆ ಪ್ರಭು ಯೇಸು ಕ್ರಿಸ್ತರ ಬಗ್ಗೆ, ಮತ್ತು ಆತ ಪುನಃ ಭೂಮಿಗೆ ಬರುತ್ತಿದ್ದಾನೆಂದು ಹೇಳು, ಇಲ್ಲವಾದಲ್ಲಿ ನೀನು ಖಂಡಿತವಾಗಿ ಸಾಯುವಿ" ಎಂದು ನನಗೆ ಹೇಳಿದವು. ಆತನ ಆತ್ಮವು ಕಚೇರಿಯೊಳಗೆ ಬಂದು ನನ್ನನ್ನು ಅದುಮಲು ಆರಂಭಿಸಿದಾಗ, ನನಗೆ ಆತನ ಅನಿರ್ವಚನೀಯವಾದ ಮತ್ತು ಅದ್ಭುತವಾದ ಬುದ್ಧಿಮತ್ತೆಯ ಅರಿವು ದೊರೆಯಿತು.[12] ಆತ ಪ್ರತಿಯೊಂದು ಅಣು ಮತ್ತು ಕಣವಾಗಿದ್ದರು. ಆತನೇ ವಾಯು. ಗತಕಾಲದ ಎಲ್ಲವೂ ಆತನಿಗೆ ತಿಳಿದಿತ್ತು ಮತ್ತು ಭವಿಷ್ಯದಲ್ಲಿ ನಡೆಯಬಹುದಾದ ಎಲ್ಲದರ ಬಗ್ಗೆ ಆತನಿಗೆ ತಿಳಿದಿತ್ತು.[13] ನಾನು ಮಾಡಿದ್ದೆಲ್ಲವೂ ಆತನಿಗೆ ತಿಳಿದಿತ್ತು ಎಂದು ನನಗೆ ತಿಳಿದಿತ್ತು, ಆದ್ದರಿಂದ ನನಗೆ ನಾಚಿಕೆಯಾಗಿತ್ತು. ಸ್ವರ್ಗ ಮತ್ತು ನರಕ ಖಂಡಿತವಾಗಿಯೂ ಇವೆ ಎಂದು ಆತ ನಂತರ ನನಗೆ ತೋರಿಸಿದರು. ಆತ ನನಗೆ ಹೇಳಿದ್ದನ್ನು ಮಾಡದಿದ್ದರೆ, ನಾನು ಎಲ್ಲಿಗೆ ಹೋಗಬಹುದೆಂದು ನನಗೆ ತಿಳಿದಿತ್ತು....ಅದು ಸ್ವರ್ಗವಂತೂ ಅಲ್ಲವೇ ಅಲ್ಲ.

ಅದು ನನಗೆ ಭಯಾನಕವಾಗಿದ್ದರೂ[14] ದೇವರು ಸತ್ಯ ಮತ್ತು ಜೀವಂತವಾಗಿದ್ದಾರೆ ಮತ್ತು ಪ್ರವಾದಿಗಳು ಮತ್ತು ಅಪೊಸ್ತಲರು ಆತನನ್ನು ವರ್ಣಿಸಿದಂತೆಯೇ ಇದ್ದಾರೆ ಎಂಬುದು ತಿಳಿದುಕೊಳ್ಳಲು ಅದ್ಭುತ ವಿಷಯವೂ ಆಗಿತ್ತು. ಆತ ಆಕಾಶಗಳನ್ನು, ಭೂಮಿಯನ್ನು, ಮತ್ತು ಅವುಗಳಲ್ಲಿ ಇರುವ ಎಲ್ಲವನ್ನೂ ಸೃಷ್ಟಿಸಿದ ದಿನಗಳಿಂದ ಸ್ವಲ್ಪವೂ ಬದಲಾಗಿಲ್ಲ.[15] ನಾನು ಯಾವಾಗಲೂ ಆತನಲ್ಲಿ ಭಯ ಭಕ್ತಿ ಇಡುವೆನು, ಆತನನ್ನು ಮೆಚ್ಚುವೆನು, ಗೌರವಿಸುವೆನು, ಪ್ರೀತಿಸುವೆನು, ಮತ್ತು ಆತನ ಸೇವೆ ಮಾಡುವೆನು ಎಂದು ನನಗೆ ಕೂಡಲೆ ತಿಳಿಯಿತು. ನಾನು ಆತನಿಗಾಗಿ ಬದುಕಲು, ಹಿಂಸೆ ಪಡಲು, ಮತ್ತು ಸಾಯಲು ಖಂಡಿತವಾಗಿ ಸಿದ್ಧವಾಗುವೆನು, ಸಂಪೂರ್ಣ ಸಂತೋಷದಿಂದ, ಮನಃಪೂರ್ವಕವಾಗಿ ಮಾಡುತ್ತೇನೆ ಎಂದು ನನಗೆ ತಿಳಿದಿತ್ತು.[16]

ದೇವರು ನನ್ನನ್ನು ಆ ಕಚೇರಿಯಿಂದ ಬಿಡುಗಡೆ ಮಾಡಿದ ನಂತರ, ನಾನು ಆತನನ್ನು ಹೀಗೆಂದು ಕೇಳಲು ಆರಂಭಿಸಿದೆ, "ನಾನು ಏನು ಮಾಡಬೇಕೆಂದು ನೀವು ಬಯಸುವಿರಿ? ನೀವು ಏನು ಹೇಳಿದರೂ ನಾನು ಮಾಡುತ್ತೇನೆ." ನನಗೆ ಯಾವುದೇ ಉತ್ತರ ಸಿಗಲಿಲ್ಲ, ಆದ್ದರಿಂದ ನಾನು ಚರ್ಚಿಗೆ ಹೋಗಬೇಕೆಂದು ಆತ ಬಯಸುತ್ತಾರೆ ಎಂದು ನಾನಂದುಕೊಂಡೆ. ಅತ್ಯಂತ ದೊಡ್ಡದು, ಅತ್ಯಂತ ಉತ್ತಮವಾದದ್ದು ಎಂದುಕೊಂಡು ನಾನು ಅಲ್ಲಿಗೆ ಹೋದೆ, ಆದರೆ ಅಲ್ಲಿ ಆತ ನನಗೆ ಸಿಗಲಿಲ್ಲ. ನಂತರ ನಾನು ಇತರ ಚರ್ಚುಗಳಿಗೆ ಹೋದೆ, ಆದರೆ ಆತ ಅಲ್ಲಿಯೂ ಇರಲಿಲ್ಲ. ನಂತರ ನಾನು, ಜ್ಞಾನಿಗಳಂತೆ ಮತ್ತು ದೈವಭಕ್ತಿಯುಳ್ಳವರಂತೆ ಕಾಣುವ, ಉದ್ದನೆಯ ಗಡ್ಡ ಮತ್ತು ಧಾರ್ಮಿಕ ಬಟ್ಟೆಗಳನ್ನು ಧರಿಸಿದ ಜನರ ಚಿತ್ರಗಳನ್ನು ಹೊದಿಕೆಯ ಮೇಲೆ ಹೊಂದಿದ್ದ ಪುಸ್ತಕಗಳನ್ನು ಓದಿದೆನು, ಆದರೆ ಆ ಪುಸ್ತಕಗಳು ತಪ್ಪಾಗಿದ್ದವು ಎಂದು ನನಗೆ ತಿಳಿದಿತ್ತು. ಏಕೆಂದರೆ ದೇವರ ಬಗ್ಗೆ ಹೆದರಿಕೊಳ್ಳಬೇಕಾಗಿಲ್ಲ[17], ದೇವರು ಜನರನ್ನು ಬೆದರಿಸುವುದಿಲ್ಲ ಮತ್ತು ನರಕಕ್ಕೆ ಹೋಗದೆ ನೀವು ಪಾಪ ಮಾಡಬಹುದು[18] ಎಂದು ಅವು ಹೇಳಿದವು. ನನಗೆ ಅಂತಹ ದೇವರ ಬಗ್ಗೆ ಚಿಂತೆ ಇರಲಿಲ್ಲ; ನನಗೆ ಬೆದರಿಕೆ ಹಾಕಿದ ದೇವರನ್ನು,[19] ನನಗೆ ಸ್ವರ್ಗ ಮತ್ತು ನರಕವನ್ನು ತೋರಿಸಿದ ದೇವರನ್ನು, ನನ್ನಿಂದ ಮಾಡಿಸಲು ಬೇರೆ ಯಾರಿಂದಲೂ ಸಾಧ್ಯವಾಗದ, ನಾನೆಂದೂ ಮಾಡಲು ಬಯಸದ ಕೆಲಸವನ್ನು ಮಾಡಿಸಿದ ದೇವರನ್ನು ಕಂಡುಕೊಳ್ಳುವ ಬಗ್ಗೆ ನನಗೆ ಚಿಂತೆಯಾಗಿತ್ತು.

ಸತ್ಯವನ್ನು ಬೈಬಲ್ ನಲ್ಲಿ ಕಾಣಬಹುದು ಎಂದು ನಾನೆಂದೂ ಅಂದುಕೊಂಡಿರಲಿಲ್ಲ. ಏಕೆಂದರೆ ಸುತ್ತಮುತ್ತಲೂ ಸಾವಿರಾರು ಬೈಬಲ್ ಗಳಿದ್ದವು. ಸಾಮಾನ್ಯ ಜನತೆಯು ನಂಬಿದ ಯಾವುದೂ ಬುದ್ಧಿವಂತಿಕೆಯುಳ್ಳದ್ದಾಗಿರುವುದಿಲ್ಲ ಎಂದು ನನಗನಿಸುತ್ತಿತ್ತು, ಏಕೆಂದರೆ ಎಲ್ಲಾ ಜನರು ಅವಿವೇಕಿಗಳು ಎಂದು ನಾನು ನಂಬಿದ್ದೆ. ಕೊನೆಗೂ ನಾನು ಬೈಬಲ್ ಓದುವುದನ್ನು ಪ್ರಾರಂಭಿಸಿದೆ ಮತ್ತು ಅದರಲ್ಲಿ ರಕ್ಷಣೆಯ ಯೋಜನೆಯನ್ನು ಮತ್ತು ಶಾಶ್ವತ ಜೀವಕ್ಕಾಗುವ ಸೂಚನೆಗಳನ್ನು ಕಂಡೆನು, ಅದು ಕ್ರಿಸ್ತರಲ್ಲಿ ಬೆಳೆಯುವುದು ಹೇಗೆ ಮತ್ತು ಆಧ್ಯಾತ್ಮಿಕವಾಗಿ, ಆತನಿಗಾಗಿ ಒಬ್ಬ ದೊಡ್ಡ ಆತ್ಮ-ಗೆಲ್ಲುವವನು ಆಗುವುದು ಹೇಗೆ ಎಂದು ಹೇಳಿತು.[20]

ನಾನು ಮೊದಲು ಬೈಬಲ್ ಅನ್ನು ಓದಲು ಪ್ರಾರಂಭಿಸಿದಾಗ, ಬೆವರ್ಲಿ ಹಿಲ್ಸ್ ಕಚೇರಿಯಲ್ಲಿ ನನ್ನ ಮೇಲೆ ಆದ ದೇವರ ಶಕ್ತಿಯ ಪ್ರಭಾವದ ಅದೇ ಅನುಭವವಾಯಿತು. ನಂತರ ದೇವರು ನನಗೆ ಸ್ವರ್ಗ ಮತ್ತು ನರಕದ ಇತರ ದರ್ಶನಗಳನ್ನು ತೋರಿಸಿದರು.[21] "ಪ್ರಭು, ನನ್ನನ್ನು ನರಕಕ್ಕೆ ಕಳುಹಿಸಬೇಡಿ!" ಎಂದು ನಾನು ದೇವರಿಗೆ ಕೂಗಿ ಹೇಳಿದೆ. ನಂತರ ನಾನು ಸ್ವರ್ಗವನ್ನು ನೋಡಿದೆ ಮತ್ತು ಸ್ವರ್ಗದ ಶಾಂತಿಯನ್ನು ಅನುಭವಿಸಿದೆ.[22] ನಾನು ಅಧ್ಯಾತ್ಮಿಕವಾಗಿ ಕುರುಡನಾಗಿದ್ದರೂ, ಬೆತ್ತಲೆಯಾಗಿದ್ದರೂ, ಮತ್ತು ಚಿಕ್ಕವನಾಗಿದ್ದರೂ, ಈ ದಿವ್ಯ ಶಾಂತಿಯನ್ನು ನಾನು ಶಾಶ್ವತವಾಗಿ ಅನುಭವಿಸಲು ಸಾಧ್ಯವಾದರೆ ನಾನು ಕುರುಡನಾಗಿ, ಬೆತ್ತಲೆಯಾಗಿ, ಮತ್ತು ನಿಕೃಷ್ಟನಾಗಿ ಉಳಿಯಲು ಸಿದ್ಧನಾಗಿದ್ದೇನೆ ಎಂದು ದೇವರಿಗೆ ಹೇಳಿದೆನು. ನಾನು ಮತ್ತೊಮ್ಮೆ ನರಕವನ್ನು ನೋಡಿದೆನು ಮತ್ತು ಮತ್ತೊಮ್ಮೆ ದೇವರಲ್ಲಿ ಕರುಣೆ ತೋರುವಂತೆ ಕೇಳಿದೆನು ಮತ್ತು ಕ್ಷಮೆಯನ್ನು ಯಾಚಿಸಿದೆನು. ಆಗ ತಂದೆಯ, ಮಗನ, ಮತ್ತು ಪವಿತ್ರಾತ್ಮನ ಶಕ್ತಿಯು ನನ್ನ ನಶ್ವರ ದೇಹವನ್ನು ಪ್ರವೇಶಿಸಿತು.[23] ಯೇಸುವಿನಲ್ಲಿ ನನ್ನ ನಂಬಿಕೆಯಿಂದ ಮತ್ತು ಆತ ನನಗಾಗಿ ಸುರಿಸಿದ ರಕ್ತದಿಂದ, ಮತ್ತು ನಾನು ಕೇಳಿ ಅನುಸರಿಸಿದ ದೇವರ ಪದಗಳಲ್ಲಿ ನನ್ನ ನಂಬಿಕೆಯಿಂದಾಗಿ,[24] ನಾನು ಎಂದಾದರೂ ಮಾಡಿದ್ದ ಪ್ರತಿಯೊಂದು ಪಾಪವೂ ನನ್ನ ಆತ್ಮದ ಮೇಲಿಂದ ಹೋಗುವ ಅನುಭವ ನನಗಾಯಿತು.[25] ನಾನು ಸ್ವಚ್ಛವಾಗಿದ್ದೇನೆ ಮತ್ತು ಶುದ್ಧವಾಗಿದ್ದೇನೆ ಎಂದು

**10** ಎಫೆಸದವರಿಗೆ 2:1, 5, ಕೊಲೊಸ್ಸೆಯವರಿಗೆ 2:13 **11** ಯೆಹೆಜ್ಕೇಲನು 37:1 **12** ಅರಣ್ಯಕಾಂಡ 24:16, 1 ಸಮುವೇಲನು 2:3, ಯೋಬನು 21:22, ಕೀರ್ತನೆಗಳು 32:8, ಜ್ಞಾನೋಕ್ತಿಗಳು 2:6, 3:20, 9:10, ಲೂಕ 1:77, ರೋಮಾಪುರದವರಿಗೆ 11:33, 1 ಕೊರಿಂಥದವರಿಗೆ 1:25, 2:16, 3:19, 2 ಕೊರಿಂಥದವರಿಗೆ 4:6

**13** ಕೀರ್ತನೆಗಳು 44:21, 94:11, ಯೆಶಾಯ 46:9-10, 1 ಕೊರಿಂಥದವರಿಗೆ 3:20, 1 ಯೋಹಾನನು 3:20, ಪ್ರಕಟನೆ 21:6, 22:13 **14** ಆದಿಕಾಂಡ 35:5, ಯಾಜಕಕಾಂಡ 26:16, ಯೋಬನು 31:23, ಯೆರೆಮೀಯ 32:21, ಯೆಹೆಜ್ಕೇಲನು 32:32, 2 ಕೊರಿಂಥದವರಿಗೆ 5:11 **15** ಆದಿಕಾಂಡ 1:1, ಮಲಾಕಿಯ 3:6, ಅಪೊಸ್ತಲರ ಕೃತ್ಯಗಳು 4:24, 2 ಕೊರಿಂಥದವರಿಗೆ 5:11, ಇಬ್ರಿಯರಿಗೆ 13:8 **16** ಕೀರ್ತನೆಗಳು 5:11, 35:19, ಯೆಶಾಯ 51:11, 61:10, ಯೋಹಾನನು 16:33, ಅಪೊಸ್ತಲರ ಕೃತ್ಯಗಳು 2:28, 20:24, ರೋಮಾಪುರದವರಿಗೆ 12:8, 15:13, 2 ಕೊರಿಂಥದವರಿಗೆ 8:12 **17** ಆದಿಕಾಂಡ 22:12, ಕೀರ್ತನೆಗಳು 112:1, ಜ್ಞಾನೋಕ್ತಿಗಳು 13:13, 14:16, 28:14, 31:30, ಪ್ರಸಂಗಿ 7:18 **18** ಜ್ಞಾನೋಕ್ತಿಗಳು 8:36, ಯೆಹೆಜ್ಕೇಲನು 18:2, 4, ಪ್ರಕಟನೆ 19:20, 20:10, 14, 15, 21:8 **19** ಆದಿಕಾಂಡ 2:17, 6:7, 9, 13, ವಿಮೋಚನಕಾಂಡ 20:5, 32:33, 34:7, ಯೆಹೆಜ್ಕೇಲನು 3:18, 18:20, ಮತ್ತಾಯ 8:12, 22:13, ಮಾರ್ಕ 16:16, ಪ್ರಕಟನೆ 2:5, 16, 22-23, 3:3, 20:15 **20** ಯೋಹಾನನು 4:35-36, 15:5, 8, 15-16, ಪ್ರಕಟನೆ 14:18 **21** ಯೆಶಾಯ 5:14, 14:9, ಲೂಕ 16:22-31, ಅಪೊಸ್ತಲರ ಕೃತ್ಯಗಳು 7:55-56, ಪ್ರಕಟನೆ 4:1-11, 14:10-11, 15:1-4, 20:10, 21:2-5, 10-27, 22:1-5 **22** ರೋಮಾಪುರದವರಿಗೆ 5:1, ಎಫೆಸದವರಿಗೆ 2:14, ಫಿಲಿಪ್ಪಿಯವರಿಗೆ 4:7, ಕೊಲೊಸ್ಸೆಯವರಿಗೆ 3:15, 1 ಥೆಸಲೋನಿಕದವರಿಗೆ 5:23, 2 ಥೆಸಲೋನಿಕದವರಿಗೆ 3:16 **23** ಯಾಜಕಕಾಂಡ 26:11-12, ಯೋಹಾನನು 14:16, 2 ಕೊರಿಂಥದವರಿಗೆ 6:16, 1 ಪೇತ್ರನು 2:5, 1 ಯೋಹಾನನು 3:24 **24** ಹಬಕ್ಕೂಕನು 2:4, ಮತ್ತಾಯ 17:20, ಲೂಕ 7:50, ಅಪೊಸ್ತಲರ ಕೃತ್ಯಗಳು 20:21, 26:18, ರೋಮಾಪುರದವರಿಗೆ 1:17, 3:28, 5:2, 10:17, 11:20, ಗಲಾತ್ಯದವರಿಗೆ 2:16, 3:11, ಎಫೆಸದವರಿಗೆ2:8, 3:17, ಇಬ್ರಿಯರಿಗೆ 10:38



*ಅಲಾಮೊ ಮಿನಿಸ್ಟ್ರೀಸ್ ಆನ್‌ಲೈನ್*

**www.alamoministries.com**

ನನಗನಿಸಿತು.[26] ಯಾವುದೋ ಒಂದು ಅದ್ಭುತ ಅನುಭವ ನನಗಾಯಿತು, ಮತ್ತು ಅದನ್ನು ನನಗೆ ಮತ್ತು ನನಗಾಗಿ, “ಇಸ್ರೇಲಿನ ಪವಿತ್ರವಾದವರು” ಆದ ಯೇಸು ಕ್ರಿಸ್ತರು ಮಾಡಿದರು.[27] ಪಾಪದಿಂದ ಮುಕ್ತನಾಗಲು ಮತ್ತು ನನ್ನನ್ನು ಪಾಪ ಮಾಡುವುದರಿಂದ ತಡೆಯುವ ಈ ಹೊಸ ಶಕ್ತಿಯನ್ನು ಹೊಂದಲು ನನಗೆ ಎಷ್ಟು ಸಂತೋಷವಾಗಿತ್ತು ಎಂದರೆ ಸಂಪೂರ್ಣ ಜಗತ್ತು ಕೂಡ ಆತನನ್ನು ಅರಿತು ಶಾಶ್ವತ ಬದುಕನ್ನು ಹೊಂದಲು ಸಾಧ್ಯವಾಗುವಂತೆ ನಾನು ಎಲ್ಲರಿಗೂ ಹೇಳಲು ಬಯಸಿದೆನು.

1964ರಿಂದ ಕ್ರಿಸ್ತರ ಸುವಾರ್ತಾ ಸಮಿತಿಯಲ್ಲಿ ಇದ್ದ ಮೇಲೂ, ನಾನು ಪ್ರತಿ ಸಲ ಬೈಬಲ್ ಓದುವಾಗಲೂ ಒಮ್ಮೆ ಬಹಳ ಒಣಗಿ ಹೋಗಿದ್ದ ಈ ಎಲುಬುಗಳ ಒಳಗೆ ಸ್ವರ್ಗದಿಂದ ಆಧ್ಯಾತ್ಮಿಕ ಸಾರವು ಸುರಿಯಲ್ಪಡುವುದನ್ನು ನಾನು ಅನುಭವಿಸುತ್ತೇನೆ. ಹಿಂದೆ ಬಹಳ ಒಣಗಿ ಹೋಗಿದ್ದ ಈ ಎಲುಬುಗಳ ಸುತ್ತ ದೇವರ ಪದವು ಆಧ್ಯಾತ್ಮಿಕ ಮಾಂಸಖಂಡವನ್ನು ಹಾಕಿ, ಆಧ್ಯಾತ್ಮಿಕ ರಕ್ಷೆಯ ಮಾಂಸ ಮತ್ತು ಚರ್ಮದ ಹೊದಿಕೆ ಹೊದಿಸಿದೆ. ದೇವರ ಪ್ರತಿಯೊಂದು ಪದವೂ ಕ್ರಿಸ್ತರನ್ನು ನನ್ನ ಹೃದಯದೊಳಗೆ ಇನ್ನೂ ಹೆಚ್ಚಾಗಿ ಕಸಿ ಮಾಡಿದೆ. ದೇವರ ಪ್ರತಿಯೊಂದು ಪದವೂ ನನ್ನ ಆತ್ಮದೊಳಗೆ ಪವಿತ್ರಾತ್ಮದ ಉಸಿರನ್ನು ಊದುವುದನ್ನು ನಾನು ಈಗಲೂ ಅನುಭವಿಸಬಲ್ಲೆನು, ಅನೇಕ ವರ್ಷಗಳಿಂದ ಸೈತಾನನು ನನ್ನ ಮೇಲೆ ಬಿಡುತ್ತಿರುವ ಎಲ್ಲ ಬೆಂಕಿಯ ಬಾಣಗಳನ್ನು ಎದುರಿಸಿ ಅವುಗಳನ್ನು ಆರಿಸುವ ಶಕ್ತಿಯನ್ನು ಅದು ನನಗೆ ಕೊಡುತ್ತದೆ. ನಾವು ಯೇಸು ಕ್ರಿಸ್ತರಲ್ಲಿ “ಜಯಶಾಲಿಗಳಿಗಿಂತ ಹೆಚ್ಚು”[28], ಮತ್ತು ನಾವು

*(ಪುಟ 8ರಲ್ಲಿ ಮುಂದುವರಿದಿದೆ)*

---

**25** ಮಾರ್ಕ 14:24, ಯೋಹಾನನು 6:53, ಅಪೋಸ್ತಲರ ಕೃತ್ಯಗಳು 20:28, ರೋಮಾಪುರದವರಿಗೆ 3:25, 5:9, ಎಫೆಸದವರಿಗೆ 1:7, 2:13, ಕೊಲೊಸ್ಸೆಯವರಿಗೆ 1:14, 20, ಇಬ್ರಿಯರಿಗೆ 9:12, 14, 22, 1 ಪೇತ್ರನು 1:18-19, ಪ್ರಕಟನೆ 1:5, 5:9
**26** ಇಬ್ರಿಯರಿಗೆ 10:19-22, 1 ಯೋಹಾನನು 1:7, ಪ್ರಕಟನೆ 1:5, 7:14 **27** ಕೀರ್ತನೆಗಳು 89:18, ಅಪೋಸ್ತಲರ ಕೃತ್ಯಗಳು 3:13-14



*ಟೋನಿ ಅಲಾಮೊ ಕ್ರೈಸ್ತಮತೀಯ ಮಿನಿಸ್ಟ್ರಿಗಳು ಇದರ ಸಹ ಸುವಾರ್ತಕರಾದ ಎಮ್.ಸಿ. ಯವರು ಪ್ಯಾಸ್ಟರ್ ಅಲಾಮೊ ಅವರ ಸುದ್ದಿಪತ್ರಿಕೆಗಳನ್ನು ವಿತರಿಸುತ್ತಿರುವುದು - ಡೆಮೊಕ್ರಾಟಿಕ್ ರಿಪಬ್ಲಿಕ್ ಆಫ್ ಕಾಂಗೊ*

## ಟ್ಯಾನ್ಜಾನಿಯ

ಪ್ರೀತಿಯ ಪ್ಯಾಸ್ಟರ್ ಅಲಾಮೊ, ನನ್ನ ಅಚ್ಚುಮೆಚ್ಚಿನ ಮತ್ತು ದೈವದತ್ತ ಪ್ಯಾಸ್ಟರ್,

ತಂದೆ ಮತ್ತು ಕರ್ತನಾದ ಕ್ರಿಸ್ತ ಯೇಸುವಿನಿಂದ ಅನುಗ್ರಹ, ಕರುಣೆ ಮತ್ತು ಶಾಂತಿಯು ನಿಮ್ಮ ಮೇಲೆ ಮತ್ತು ನಿಮ್ಮ ಸುವಾರ್ತಾ ಸೇವೆಯ ಮೇಲಿರಲಿ. 1994ರಿಂದ ನಾನು ಸೇವೆ ಸಲ್ಲಿಸುತ್ತಿರುವ ದೇವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ, ನಾನು ಟ್ಯಾನ್ಜಾನಿಯದ ಮುಸೋಮದಲ್ಲಿ ಸುವಾರ್ತಾಬೋಧಕನಾಗಿದ್ದೇನೆ. ನಾನು ದೇಶದಾದ್ಯಂತ, ಮತ್ತು ಟ್ಯಾನ್ಜಾನಿಯದ ಹೊರಗೆ ಕೂಡ ನನ್ನ ಸುವಾರ್ತಾ ಸೇವೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದೇನೆ. ಪ್ಯಾಸ್ಟರ್, ನಾನು ನಿಮ್ಮ ಧ್ವನಿಯನ್ನಾಗಲಿ ಬೋಧನೆಯನ್ನಾಗಲಿ ಕೇಳಲಿಲ್ಲ, ಅಥವಾ ನಿಮ್ಮ ಮುಖವನ್ನೂ ನೋಡಿಲ್ಲ, ಆದರೆ ಅತ್ಯಂತ ಶ್ರೇಷ್ಠ ಅಂತರರಾಷ್ಟ್ರೀಯ ವಕ್ತಾರರಾದ ನಿಮ್ಮಿಂದ, ಪ್ಯಾಸ್ಟರ್ ಟೋನಿ ಅಲಾಮೊ ಅವರಿಂದ ಬರೆಯಲ್ಪಟ್ಟ “ಒಣಗಿದ ಎಲುಬುಗಳು”, ಉದ್ಧಾರಕ ಮತ್ತು “ದೇವರ ತೋಟ”ಗಳಂತಹ ಅದ್ಭುತ ಸಂದೇಶಗಳನ್ನು ನಾನು ಪಡೆಯುತ್ತೇನೆ ಮತ್ತು ಓದುತ್ತೇನೆ. ಈ ಸಾಹಿತ್ಯಗಳ ಮೂಲಕ, ಕ್ರಿಸ್ತರ ದೇಹವಾದ ಚರ್ಚ್ ಬಗ್ಗೆ ನಿಮ್ಮ ಈಗಿನ ಮತ್ತು ಭವಿಷ್ಯದ ಚಿಂತೆಯ ಬಗ್ಗೆ ನಾನು ತಿಳಿದುಕೊಂಡಿದ್ದೇನೆ ಮತ್ತು ಅರ್ಥಮಾಡಿಕೊಂಡಿದ್ದೇನೆ. ಪ್ರಭುವಿನಲ್ಲಿ ನಾನು ಮತ್ತು ನನ್ನ ಜೊತೆಯ ಕೆಲಸಗಾರರು ಮತ್ತು ನಿಮ್ಮ ಸಾಹಿತ್ಯಗಳ ಮೂಲಕ ಕ್ರಿಸ್ತರನ್ನು ಸ್ವೀಕರಿಸಿರುವ ಹೊಸದಾಗಿ ಮತಾಂತರಗೊಂಡಿರುವವರು, ನಂಬಿಗಸ್ತರ ಸಮುದಾಯ ಚರ್ಚ್ (ಬಿಲೀವರ್ಸ್ ಕಮ್ಯೂನಿಟಿ ಚರ್ಚ್ - ಬಿ.ಸಿ.ಸಿ) ಎಂಬ ಫೆಲೊಷಿಪ್‌ಅನ್ನು ರಚಿಸಿದ್ದೇವೆ. ನಾವು ಪೂರ್ವ ಆಫ್ರಿಕದಲ್ಲಿ, ವಿಶೇಷವಾಗಿ ಟ್ಯಾನ್ಜಾನಿಯದಲ್ಲಿ, ನಿಮ್ಮ ಸುವಾರ್ತಾಸೇವೆಯನ್ನು ವಿಸ್ತರಿಸಲು, ಮತ್ತು ದೂರದ ಹಳ್ಳಿಗಳಿಗೆ ವಿಸ್ತರಿಸಲು ಬಯಸುತ್ತೇವೆ. ದಯವಿಟ್ಟು, ಪ್ಯಾಸ್ಟರ್, ನಮಗೆ ನಿಮ್ಮ ನೆರವಿನ ಅಗತ್ಯವಿದೆ. ಈ ಸುವಾರ್ತಾ ಮಿನಿಸ್ಟ್ರಿ ಮತ್ತು ಸ್ಥಳೀಯ ಸುವಾರ್ತಾ ಬೋಧನೆಗಾಗಿ ನಮ್ಮ ಅವಶ್ಯಕತೆಗಳನ್ನು ಪೂರೈಸಲು ನಮಗೆ ಲೌಡ್‌ಸ್ಪೀಕರ್‌ಗಳನ್ನು, ಒಂದು ಜೆನರೇಟರ್, ಹಾಗೂ ಹೊಸದಾಗಿ ಮತಾಂತರಗೊಳ್ಳುವವರಿಗಾಗಿ ಬೈಬಲ್‌ಗಳನ್ನು ಮತ್ತು ಬೋಧನೆಗಳ ಸಾಹಿತ್ಯವನ್ನು ಒದಗಿಸಲು ನಿಮ್ಮಿಂದ ಸಾಧ್ಯವಾದರೆ ಇದರ ಮೂಲಕ, ದೇವರು ನಿಮ್ಮನ್ನು ಧಾರಾಳವಾಗಿ ಆಶೀರ್ವದಿಸುತ್ತಾರೆ. ಪ್ರಭು ನಿಮ್ಮ ಸುವಾರ್ತಾ ಸೇವೆಯನ್ನು ಆಶೀರ್ವದಿಸಿ, ನೀವು ಮಾಡಿರುವ ಒಳ್ಳೆಯ ಕೆಲಸಕ್ಕಾಗಿ ನಿಮ್ಮ ಆಧ್ಯಾತ್ಮಿಕ ಬದುಕನ್ನು ಉದ್ಧಾರ ಮಾಡಲಿ. ನಾವು ನಿಮ್ಮ ಸಕಾರಾತ್ಮಕ ಉತ್ತರವನ್ನು ಮೆಚ್ಚುತ್ತೇವೆ, ಮತ್ತು ಶ್ರದ್ಧೆಯಿಂದ ಕಾಯುತ್ತಿದ್ದೇವೆ.

ಕ್ರಿಸ್ತರಲ್ಲಿ ನಿಮ್ಮ,
ಒ. ಇ. ಎಮ್.
ಟ್ಯಾನ್ಜಾನಿಯ, ಪೂರ್ವ ಆಫ್ರಿಕ

## ಕ್ಯಾಲಿಫೋರ್ನಿಯ

ಪ್ರೀತಿಯ ಪ್ಯಾಸ್ಟರ್ ಅಲಾಮೊ,

ನಾನು ಪವಿತ್ರಾತ್ಮದ ಬಲದಿಂದ, ಮತ್ತು ಯುದ್ಧಕ್ಕೆ ಸಂಪೂರ್ಣವಾಗಿ ಸಜ್ಜಾಗಿ, ದೇವರ ಕವಚದಲ್ಲಿ (ಎಫೆಸದವರಿಗೆ 6:10-17), ಈ ಪತ್ರವನ್ನು ಬರೆಯುತ್ತಿದ್ದೇನೆ. ಇತ್ತೀಚೆಗೆ, ದೇವರ ಸೈನ್ಯದಲ್ಲಿರುವ ಒಬ್ಬ ಸಹೋದರನೊಂದಿಗೆ ಆಧ್ಯಾತ್ಮಿಕ ಬೆಳವಣಿಗೆ ಮತ್ತು ಸ್ನೇಹದ ಮೂಲಕ, ಬೈಬಲ್ ನ ಕೆಲವು ಸತ್ಯಗಳು ಮತ್ತು ರಹಸ್ಯಗಳು ಪವಿತ್ರಾತ್ಮನ ಮೂಲಕ ಪ್ರಕಟಿತವಾಗಿವೆ. ದೇವರು ತನ್ನ ಆಯ್ಕೆಯಾದವರನ್ನು ಈಗ ಸಿದ್ಧಗೊಳಿಸುತ್ತಿದ್ದಾರೆ ಎಂದು ನನಗೆ ತಿಳಿದಿದೆ, ಮತ್ತು ನಿಮ್ಮ ಪ್ರಕಟಣೆಯಿಂದ ಒಂದು ಪುಟವನ್ನು ನಾನು ಓದಿದೆ. ನಾನು ಕೆಲವು ಸತ್ಯಗಳನ್ನು ತಿಳಿದುಕೊಳ್ಳಬೇಕಾದ ನಿರ್ಣಾಯಕ ಸಮಯದಲ್ಲಿ ದೇವರು ನಿಮ್ಮ ಸಾಹಿತ್ಯವನ್ನು ನನಗೆ ತಂದಿದ್ದಾರೆ ಎಂದು ಹೇಳಬೇಕು. ನಿಮ್ಮ ಬೋಧನೆಗಳು ನನ್ನ ಮೇಲೆ ಅಗಾಧವಾದ ಪ್ರಭಾವ ಬೀರಿವೆ. ನೀವು ಅಪ್ಪಟ ಸತ್ಯವನ್ನೇ ಹೇಳುತ್ತೀರಿ, ಅಹಿತವಾದದ್ದನ್ನು ಹಿತವಾಗುವಂತೆ ಹೇಳುವುದಿಲ್ಲ, ಭವಿಷ್ಯವಾಣಿಯ ಎಲ್ಲಾ ರುಚಿಕರ ಭಾಗಗಳನ್ನು ನನಗೆ ಹೇಳುತ್ತೀರಿ. ದಯವಿಟ್ಟು ನನ್ನನ್ನು ನಿಮ್ಮ ಸದಸ್ಯರಲ್ಲಿ ಒಬ್ಬನೆಂದೆಣಿಸಿ ನನ್ನನ್ನು ನಿಮ್ಮ ಮೇಲಿಂಗ್ ಪಟ್ಟಿಯಲ್ಲಿ ಸೇರಿಸಿಕೊಳ್ಳಿ, ಈ ಮೂಲಕ ನಾನು ದೇವರ ಸತ್ಯದ ಖಡ್ಗವನ್ನು ಹಿಡಿದು ಪವಿತ್ರಾತ್ಮದಲ್ಲಿ ಬೆಳೆಯಬಹುದು. ನಾನು ರಾಜ್ಯ ಕಾರಾಗೃಹದಲ್ಲಿದ್ದೇನೆ, ಆದ್ದರಿಂದ ದಯವಿಟ್ಟು ಗಟ್ಟಿರಟ್ಟು ಕಟ್ಟಿದ ಪುಸ್ತಕಗಳನ್ನು ಕಳುಹಿಸಬೇಡಿ. ನಾನು ಹಣದ ಕೊಡುಗೆ ನೀಡಲು ಸಾಧ್ಯವಿಲ್ಲ, ಆದರೆ ನಿಮ್ಮ ಶಕ್ತಿಶಾಲಿಯಾದ ಸುವಾರ್ತಾ ಸೇವೆಗೆ ಏಳಿಗೆಯಾಗಲಿ ಎಂಬುದಕ್ಕೆ ನನ್ನ ಪ್ರಾರ್ಥನೆಗಳು ನಿಮ್ಮ ಸಂಪೂರ್ಣ ಸಂಸ್ಥೆಯೊಂದಿಗಿದೆ.

ನಿಮ್ಮ ವಿಶ್ವಾಸಿ.
ಬಿ.ಎಲ್.
ಕಾರ್ಕೊರಾನ್, ಕ್ಯಾಲಿಫೋರ್ನಿಯ

## ಭಾರತ

ನಮ್ಮ ಅತ್ಯಂತ ಪ್ರಿಯವಾದ ಮತ್ತು ಆಧ್ಯಾತ್ಮಿಕವಾಗಿ ಅಮೂಲ್ಯರಾದ ಸಹೋದರ ಮತ್ತು ನಾಯಕ, ರೆವರೆಂಡ್ ಟೋನಿ ಅಲಾಮೊ,

ಭಾರತದ ಟೋನಿ ಅಲಾಮೊ ಕ್ರೈಸ್ತ ಮಿನಿಸ್ಟ್ರಿಗಳ ಭಾರತೀಯ ಸಹೋದರರಿಂದ ಶುಭಾಶಯಗಳು ಮತ್ತು ನಮಸ್ಕಾರಗಳು. ನನಗೆ ಪವಿತ್ರ ಬೈಬಲ್‌ಗಳು ಮತ್ತು ಉದ್ಧಾರಕ ಸೇರಿದಂತೆ ಇತರ ಕೆಲವು ಸಾಹಿತ್ಯಗಳು ಸಿಕ್ಕಿದಾಗ ಸಂತೋಷವಾಯಿತು ಮತ್ತು ಕೃತಜ್ಞನಾದೆನು. ಶ್ರದ್ಧಾಭಕ್ತಿಯಿಂದ, ನನ್ನ ಕ್ರೈಸ್ತ ಸಹೋದರರು ಮತ್ತು ನಾನು ಇಂಗ್ಲಿಷ್ ಬಲ್ಲವರಿಗೆ ರಕ್ಷಣೆಯ ನಿಜ ಯೋಜನೆಯನ್ನು ಹಂಚುತ್ತಿದ್ದೇವೆ, ಮತ್ತು ಇಂಗ್ಲಿಷ್ ಗೊತ್ತಿಲ್ಲದವರಿಗೆ ಮತ್ತು ಹಳ್ಳಿಗಳಲ್ಲಿ ವಾಸಿಸುವವರಿಗಾಗಿ ಈ ಅನನ್ಯ ಸಾಹಿತ್ಯವನ್ನು ನಮ್ಮ ಮಾತೃಭಾಷೆಗೆ ಅನುವಾದ ಮಾಡಲು ಕೂಡ ಪ್ರಯತ್ನಿಸುತ್ತಿದ್ದೇವೆ. ಬಹಳಷ್ಟು ಜನರು, ಬಸ್ ಮತ್ತು ಆಟೊ ಚಾಲಕರು, ಹೈಸ್ಕೂಲ್, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳು, ಮತ್ತು ಕಾರ್ಖಾನೆಗಳ ಕೆಲಸಗಾರರು ಮತ್ತು ಮಾಲೀಕರು, ಶಿಕ್ಷಕರು, ಮತ್ತು ಬಹಳ ಆಸಕ್ತಿಯಿಂದ ಅವುಗಳನ್ನು ಪಡೆದ ಎಲ್ಲರೂ ರಕ್ಷಣೆಯ ನಿಜ ಯೋಜನೆಯನ್ನು ಹೊಂದಿರುವ ಈ ಸಾಹಿತ್ಯದಿಂದ ಅನುಗ್ರಹಿತರಾಗುತ್ತಿದ್ದಾರೆ. ನಮ್ಮ ನಗರದಲ್ಲಿ ನಿಮ್ಮ ಸಾಹಿತ್ಯದ ಮೂಲಕ ಹಲವಾರು ಜನರು ಯೇಸು ಕ್ರಿಸ್ತರನ್ನು ತಮ್ಮ ವೈಯಕ್ತಿಕ ರಕ್ಷಕರನ್ನಾಗಿ ಸ್ವೀಕರಿಸಿದರು. ನಿಮ್ಮ ಅಮೂಲ್ಯ ಪ್ರಾರ್ಥನೆಗಳಲ್ಲಿ ನಮ್ಮ ಮಿನಿಸ್ಟ್ರಿಗೆ ದಯವಿಟ್ಟು ಆಶ್ರಯ ನೀಡಿ.

ಗೌರವಪೂರ್ಣವಾಗಿ ಆತನ ದ್ರಾಕ್ಷಿತೋಟದಲ್ಲಿ
ನಿಮ್ಮ ಸೇವಕ.
ನಿಮ್ಮ ವಿಶ್ವಾಸಿ,
ಪ್ಯಾಸ್ಟರ್ ಎನ್.ಟಿ.
ರಾಂಪಚೋದಾವರಂ ಮಂಡಲ್
ಭಾರತ



*ಪ್ಯಾಸ್ಟರ್ ಅಲಾಮೊ ಅವರ ಬಲವತ್ತಾದ, ಆತ್ಮ-ಗೆಲ್ಲುವ ಪುಸ್ತಕ, ಉದ್ಧಾರಕ (ದ ಮೆಸ್ಸಾಯ) ವನ್ನು, ಸಹೋದರ ಟಿ.ಆರ್., ವಿತರಿಸುತ್ತಿರುವುದು - ರಾಜಮಂಡ್ರಿ, ಭಾರತ*

ಇದು ಪ್ಯಾಸ್ಟರ್ ಅಲಾಮೊ ಅವರ ಪುಸ್ತಕ, ಉದ್ಧಾರಕದಿಂದ (ದ ಮೆಸ್ಸಾಯ) ಉದ್ಧರಿಸಿದ ಒಂದು ಭಾಗ

**ಮುದ್ರಣದಲ್ಲಿ ಅತ್ಯಂತ ದೊಡ್ಡ ಪವಾಡ:**

**ಉದ್ಧಾರಕ**

# ದ ದಾಖಲೆ

**ಬೈಬಲ್ ಭವಿಷ್ಯವಾಣಿಯ ಪ್ರಕಾರ**

**“ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರೂ ಸಾಕ್ಷಿಹೇಳಿದ್ದಾರೆ” (ಅಪೋಸ್ತಲರ ಕೃತ್ಯಗಳು 10:43).**

**“ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ”**

**(ಕೀರ್ತನೆಗಳು 40:7, ಇಬ್ರಿಯರಿಗೆ 10:7)**

**(ಬಿ) ಯೆಶಾಯ 53**

**(9) ಉದ್ಧಾರಕರ ಪರಾರ್ಥವಾದ ಕಷ್ಟಗಳು, ಯೆಶಾಯ 53:4-6, 8, 10-12:**

“ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ, ಹೌದು;... ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟುಮಾಡುವ ವಿಚಾರಣೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು...ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು....ನಮ್ಮ ಜನಗಳ ದ್ರೋಹಗಳ ದೆಸೆಯಿಂದ ಈ ಪೆಟ್ಟು ಅವನ ಮೇಲೆ ಬಿತ್ತಲ್ಲಾ.... ಇವನು ತನ್ನ ಆತ್ಮವನ್ನು ಪ್ರಾಯಶ್ಚಿತ್ತಯಜ್ಞಕ್ಕಾಗಿ ಒಪ್ಪಿಸಿದ ಮೇಲೆ.” “ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವವನು...ಬಹುಜನ ದ್ರೋಹಿಗಳ ಪಾಪವನ್ನು ಹೊರುತ್ತಾ.”[1]

ಈ ಅಧ್ಯಾಯದಲ್ಲಿ ಎದ್ದು ಕಾಣುವ ಸತ್ಯಾಂಶ ಉದ್ಧಾರಕನ ಪರಾರ್ಥವಾದ, ಪರ್ಯಾಯವಾದ ಕಷ್ಟಗಳೇ ಆಗಿವೆ. ಈ ಅದ್ಭುತ ಅಧ್ಯಾಯ ಕೇವಲ ಹನ್ನೆರಡು ಶ್ಲೋಕಗಳನ್ನು ಹೊಂದಿದೆ, ಆದರೂ ಹದಿನಾಲ್ಕು ಬಾರಿ ಎಲ್ಲಾ ಮಾನವ ಪಾಪಕ್ಕಾಗಿ ಪರಾರ್ಥವಾದ ಬಲಿಯ ತತ್ತ್ವವನ್ನು ಘೋಷಿಸುತ್ತದೆ. ಈ ಸಂಪೂರ್ಣ ಭಾಗ (ಯೆಶಾಯ ಈ ಪರಿಕಲ್ಪನೆಯಿಂದ ತುಂಬಿ ತುಳುಕುತ್ತಿದೆ, ಮತ್ತು ಪ್ರಭು ಯೇಸುವನ್ನು “ನಮಗೋಸ್ಕರ... ಪಾಪ ಸ್ವರೂಪಿಯಾಗಿ ಮಾಡಲ್ಪಟ್ಟ”ವರೆಗೆ (2 ಕೊರಿಂಥದವರಿಗೆ 5:21) ಮತ್ತು “ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು” (1 ಕೊರಿಂಥದವರಿಗೆ 15:3) ಎನ್ನುವವರೆಗೆ ರಹಸ್ಯವು ಬಗೆಹರಿಸಲ್ಪಟ್ಟಿರಲಿಲ್ಲ.

ಯೆಹೋವನು “ನಮ್ಮೆಲ್ಲರ ದೋಷಫಲವನ್ನು ಅವನ ಮೇಲೆ ಹಾಕಿದನು” (ಯೆಶಾಯ 53:6). ಉದ್ಧಾರಕರು, ಮಾನವರ ಮೇಲೆ ಬೀಳಬಹುದಾಗಿದ್ದ ವಿಚಾರಣೆಯ ಎಲ್ಲಾ ಜ್ವಲಿಸುವ ಕಿರಣಗಳು ಯಾರ ಮೇಲೆ ಬಿದ್ದವೋ ಅವರೇ ದಿವ್ಯ ವಿಮೋಚಕರಾಗಿದ್ದರು. ಕ್ರಿಸ್ತರ ಪರ್ಯಾಯವಾದ ಬಲಿಯ ಮೂಲಕ ದೇವರ ಕೃಪೆ ಎಷ್ಟು ಅದ್ಭುತವಾಗಿದೆ! ಹೀಗೆ, ಶಿಲುಬೆಯು, ಒಮ್ಮೆಲೆ, ಕ್ರಿಸ್ತರ ಅತ್ಯಂತ ಕೆಟ್ಟ ಅವಮಾನ, ಜೊತೆಗೆ ಆತನ ಅತ್ಯುನ್ನತ ಮಹಿಮೆಯೂ ಆಯಿತು - ಮತ್ತು ಮನುಷ್ಯರಿಗೆ ರಕ್ಷಣೆಯನ್ನು ತರುವ ನಿಗದಿತ ಮಾರ್ಗವಾಯಿತು.

ಪ್ರಭು ಯೇಸು ಬಂದಾಗ, ಕ್ರೂಜೆಯ ಮೇಲೆ ತನ್ನ ಮರಣದ ಮೂಲಕ ಮಾನವಕುಲ ಮತ್ತು ದೇವರ ನಡುವೆ ಸಾಮರಸ್ಯವನ್ನು ಸ್ಥಾಪಿಸುವುದಕ್ಕಾಗಿ ಆತ ಉದ್ಧಾರಕನಿಗೆ ಸಂಬಂಧಿಸಿದ ಭವಿಷ್ಯವಾಣಿಗಳನ್ನು ಪೂರೈಸಿದರು: “ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು” (1 ಪೇತ್ರನು 2:24)

**(10) ಉದ್ಧಾರಕರು ಸಮ್ಮತಿಯಿಂದ ಮತ್ತು ದೂರಿಲ್ಲದೆ ಸಂಕಟವನ್ನು ಅನುಭವಿಸುತ್ತಾರೆ, ಯೆಶಾಯ 53:7:**

“ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಲಿಲ್ಲ; ವಧಾಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ.”

1 ದೈವದತ್ತ ಲೇಖಕರು, ಪರಾರ್ಥವಾದ ಪಶ್ಚಾತ್ತಾಪದ ಸಿದ್ಧಾಂತವನ್ನು ಪದೇಪದೇ ಹಾಗೂ ವಿವಿಧ ರೂಪಗಳಲ್ಲಿ, ಆದರೂ ಅದೇ ರೀತಿ ಇರುವಂತೆ ಪ್ರಸ್ತುತಪಡಿಸುವ ಮೂಲಕ ಅದನ್ನು ಈ ಭಾಗದಿಂದ ತೆಗೆದುಹಾಕುವಂತೆ ಮಾಡುವ ಯಾವುದೇ ಕೌಶಲ ಅಥವಾ ಪರಿಣತಿಯನ್ನು ಅಸಾಧ್ಯಗೊಳಿಸುತ್ತಾರೆ, ಒಂದು ಕಡೆ ಯಶಸ್ವಿಯಾದವರು ಅದನ್ನು ಮತ್ತೊಂದು ಕಡೆಯಲ್ಲಿ ಕಡ್ಡಾಯವಾಗಿ ಎದುರಿಸುತ್ತಾರೆ.



*ಪ್ಯಾಸ್ಟರ್ ಮೈಕ್ ಒಮೊಸೆಗನ್, ತನ್ನ ಚರ್ಚಿನ ಕೆಲವು ಸದಸ್ಯರೊಂದಿಗೆ ಪ್ಯಾಸ್ಟರ್ ಅಲಾಮೊ ಅವರ ಆತ್ಮ-ಗೆಲ್ಲುವ ಸಾಹಿತ್ಯ ಮತ್ತು ಕಿಂಗ್ ಜೇಮ್ಸ್ ಆವೃತ್ತಿ ಬೈಬಲ್‌ಗಳನ್ನು ಟೋನಿ ಅಲಾಮೊ ಕ್ರೈಸ್ತಮತೀಯ ಮಿನಿಸ್ಟ್ರಿಗಳಿಂದ ಪಡೆಯುತ್ತಿರುವುದು - ಸುಲೆಯ, ನೈಜೀರಿಯ*

## ನಮ್ಮ ಇಪ್ಪತ್ತನಾಲ್ಕು ಗಂಟೆ ಪ್ರಾರ್ಥನೆ ಮತ್ತು ಮಾಹಿತಿ ಲೈನ್‌ನಿಂದ:

ಪ್ಯಾಸಡೀನ, ಕ್ಯಾಲಿಫೋರ್ನಿಯದ ಫುಲರ್ ತಿಯಲಾಜಿಕಲ್ ಸೆಮಿನರಿಯ ಮ್ಯಾಕ್‌ಆಲಿಸ್ಟರ್ ಲೈಬ್ರರಿಯಿಂದ ಡಿ.ಆರ್. ಅವರು ಕರೆ ಮಾಡಿ, ತನಗೆ ನೆಲದ ಮೇಲೆ ಕೆಲವು ಸುದ್ದಿಪತ್ರಿಕೆಗಳು ಸಿಕ್ಕಿದವು ಮತ್ತು ತಾನು ಅವನ್ನು ಓದಿರುವುದಾಗಿ ಹೇಳಿದರು. ಅವರಿಗೆ ಅವು ಬಹಳ ಇಷ್ಟವಾದವು ಎಂದು ಅವರು ಹೇಳಿದರು ಮತ್ತು ಮೇಲಿಂಗ್ ಪಟ್ಟಿಯಲ್ಲಿ ತನ್ನನ್ನು ಸೇರಿಸಬೇಕೆಂದು ಅವರು ಕೋರುತ್ತಿದ್ದಾರೆ. ಪಾಸ್ಟರ್ ಅಲಾಮೊ ಬರೆದಿರುವ ಪ್ರತಿಯೊಂದು ಸುದ್ದಿಪತ್ರಿಕೆ ಮತ್ತು ಪ್ರತಿಯೊಂದು ಸಾಹಿತ್ಯವನ್ನು ನಾವು ಅವರಿಗೆ ಕಳುಹಿಸಬೇಕೆಂದು ಬಯಸುತ್ತಿರುವುದಾಗಿ ಅವರು ಹೇಳಿದರು. ದೇವರ ಪದದ ಬಗ್ಗೆ ಮತ್ತು ಪ್ಯಾಸ್ಟರ್ ಅಲಾಮೊ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಸಂಶೋಧಕರು ತನ್ನ ಲೈಬ್ರರಿಗೆ ಬರಲು ಸಾಧ್ಯವಾಗುವಂತೆ ಅವರು ಪ್ಯಾಸ್ಟರ್ ಅಲಾಮೊ ಅವರ ಎಲ್ಲಾ ಸಾಹಿತ್ಯದ ಸಂಗ್ರಹವನ್ನು ಹೊಂದಲು ಬಯಸುತ್ತಿದ್ದಾರೆ. ಅವರು ಇದರ ಬಗ್ಗೆ ಬಹಳ ಉತ್ಸಾಹಗೊಂಡಿದ್ದರು. ಅವರು ತನ್ನ ಪುಸ್ತಕದ ಕಪಾಟುಗಳಲ್ಲಿ ಒಂದನ್ನು ಕೇವಲ ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯದಿಂದ ತುಂಬಲು ಇಷ್ಟಪಡುವುದಾಗಿ ಹೇಳಿದರು. ಪ್ಯಾಸ್ಟರ್ ಅಲಾಮೊ ಅವರು ಇದ್ದದ್ದನ್ನು ಇದ್ದ ಹಾಗೆ ಹೇಳುತ್ತಾರೆಂದು ಅವರು ಹೇಳಿದರು.

ಸಂಕಟ ಅನುಭವಿಸುವ ಇತರರು ಸಾಮಾನ್ಯವಾಗಿ ಗೊಣಗಾಡುತ್ತಾರೆ ಅಥವಾ ದೂರುತ್ತಾರೆ, ವಿಶೇಷವಾಗಿ ಅವರಿಗೆ ಅನ್ಯಾಯವಾದಾಗ - ಆದರೆ ಉದ್ಧಾರಕರ ಸಂಕಟ ಹಾಗಿರಲಿಲ್ಲ. "ನಮ್ಮ ಪಾಪಗಳನ್ನು ಹೊರುವ" ಆತನ ನಿಗದಿತ ಕೆಲಸಕ್ಕೆ ಆತ ಸ್ವತಃ ತನ್ನನ್ನು ತಾನೇ ಒಪ್ಪಿಸಿದನು ಮತ್ತು ಬಲಿಗೆ ಹೋಗುವ ಕುರಿಯಂತೆ ಹೋದನು. ಉದಾತ್ತವಾದ ಮತ್ತು ಅಗಾಧವಾದ ನಿಶ್ಯಬ್ದತೆಯಲ್ಲಿ ಉದ್ಧಾರಕರು ಅತ್ಯಧಿಕದವರೆಗೆ ಸಹಿಸುತ್ತಾರೆ, ಏಕೆಂದರೆ ಅದೇ ಯೆಹೋವನ ಇಚ್ಛೆ. ಮತ್ತು ಇಲ್ಲಿ ನಾವು ಎಲ್ಲೇ ಇಲ್ಲದ ಪ್ರೀತಿಯ ಬಹಳ ಆಳವಾದ ರಹಸ್ಯದೊಳಗೆ ನೋಡುತ್ತೇವೆ.

ಹೊಸ ಒಡಂಬಡಿಕೆಯಲ್ಲಿ, ಯೇಸು ಕ್ರಿಸ್ತರು ಹೊಡೆಯಲ್ಪಟ್ಟಾಗ, ಅವರ ಮೇಲೆ ಸುಳ್ಳು ಆಪಾದನೆ ಹೊರಿಸಲ್ಪಟ್ಟಾಗ, ಅವರನ್ನು ಕೆಟ್ಟದಾಗಿ ನಡೆಸಿಕೊಂಡಾಗ, ಅವಮಾನಿಸಲ್ಪಟ್ಟಾಗ, ಅವರ ಮೇಲೆ ಉಗುಳಿದಾಗ, ಅವರ ಮೇಲೆ ಕೈ ಮಾಡಿದಾಗ, ಅವರನ್ನು ಚಾವಟಿಯಿಂದ ಹೊಡೆದಾಗ, ಮತ್ತು ಶಿಲುಬೆಯ ಮೇಲೇರಿಸಿದಾಗ, ಅಸಮಾಧಾನದ ಜ್ವಾಲೆ ಇರಲಿಲ್ಲ, ಆತನನ್ನು ಶಿಲುಬೆಯ ಮೇಲೇರಿಸಿದವರ ವಿರುದ್ಧ ಅಪರಾಧದ ಆರೋಪಗಳಿರಲಿಲ್ಲ, ಜೋರಾಗಿ ದೂರಲಿಲ್ಲ, ಕೇವಲ ಪ್ರಾರ್ಥನೆ ಇತ್ತು.

ಆತನ ವಿರುದ್ಧ ಹಲವಾರು ಸುಳ್ಳು ಸಾಕ್ಷಿಗಳು ಬಂದು ಹೋದ ನಂತರ, ಮಹಾಯಾಜಕರು, "ನೀನೇನೂ ಉತ್ತರ ಹೇಳುವುದಿಲ್ಲವೋ?..... ಎಂದು ಕೇಳಿದರು. ಆದರೆ ಯೇಸು ಸುಮ್ಮನಿದ್ದನು" (ಮತ್ತಾಯ 26:59-63) .

ಶಿಲುಬೆಯ ಪೀಡೆಯನ್ನು ಸಹಿಸುವಾಗ ಯೇಸುವಿನ ಪ್ರಾರ್ಥನೆ ಇಲ್ಲಿದೆ: "ತಂದೆಯೇ, ಅವರನ್ನು ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು" (ಲೂಕ 23:34).

ಈ ಸಂಪೂರ್ಣ ವಿಧಾನ ಎಷ್ಟು ಅಸಾಮಾನ್ಯ, ಪ್ರಕೃತಿ ಮತ್ತು ಮಾನವ ಅನುಭವಕ್ಕೆ ಎಷ್ಟು ವಿರುದ್ಧವಾಗಿದೆ ಎಂದರೆ, ಆ ವಿಚಿತ್ರವಾದ ಭವಿಷ್ಯವಾಣಿಯಿಂದ ಮತ್ತು ಅದರ ಅಸಾಧಾರಣ ಪೂರೈಕೆಯಿಂದ ಚಕಿತಗೊಳ್ಳದೆ ಇರಲು ಸಾಧ್ಯವಿಲ್ಲ.

**(11) ಕಾರಾಗೃಹದಿಂದ ಮತ್ತು ವಿಚಾರಣೆಯಿಂದ ಕರೆದುಕೊಂಡು ಹೋದಾಗ, ಆತನ ಪರವಾಗಿ ವಾದಿಸಲು ಉದ್ಧಾರಕರು ಯಾವುದೇ ವಕೀಲರನ್ನು, ಆತನ ನಿರ್ದೋಷತೆಯನ್ನು ಘೋಷಿಸಲು ಯಾವುದೇ ಗೆಳೆಯನನ್ನು ಹೊಂದಿರುವುದಿಲ್ಲ, ಯೆಶಾಯ 53:8:**

"ಹಿಂಸೆಯ ನ್ಯಾಯದಿಂದ ಕೊಲ್ಲಲ್ಪಟ್ಟನು,.....ಅವನ ಕಾಲದವರಲ್ಲಿ ಯಾರು ಮನಮುಟ್ಟಿ ಮರುಗಿದರು?"

ಅಪರಾಧಿಗಳ ಪರವಾಗಿ ಯಾರಿಗಾದರೂ ಏನಾದರೂ ಗೊತ್ತಿದ್ದರೆ ಅವರು ಮುಂದೆ ಬಂದು ಅದನ್ನು ಘೋಷಿಸಬೇಕೆಂದು ಕರೆ ನೀಡುವ ಪದ್ಧತಿಯನ್ನು ಸ್ಯಾನ್ಹೆಡ್ರಿನ್ "ಜೀವಕ್ಕಾಗಿ ವಿಚಾರಣೆಗಳಲ್ಲಿ" ಹೊಂದಿದ್ದರು. ಇದನ್ನು ನಜರೇತಿನ ಯೇಸುವಿನ ವಿಚಾರಣೆಯಲ್ಲಿ ನಡೆಸಲಾಗಲಿಲ್ಲ, ಬದಲಿಗೆ, ಸ್ಯಾನ್ಹೆಡ್ರಿನ್ ಎದುರು ಆತನ ಗಡಿಬಿಡಿಯ, ನಕಲಿ ವಿಚಾರಣೆಯಲ್ಲಿ ಕ್ರಮಗಳು ಅವರ ಸ್ವಂತ ನಿಯಮಗಳಿಗೆ ತದ್ವಿರುದ್ಧವಾಗಿದ್ದವು ಮತ್ತು ಸತ್ಯ ಮತ್ತು ನ್ಯಾಯದ ಎಲ್ಲಾ ಪ್ರಮಾಣಗಳಿಗೆ ವಿರುದ್ಧವಾಗಿದ್ದವು.

ಯೇಸು ಭ್ರಷ್ಟ ಯೆಹೂದ್ಯ ವರ್ಗಶ್ರೇಣಿ ಮತ್ತು ಆ ಕಾಲದಲ್ಲಿ ಭೂಮಿಯ ಮೇಲೆ ಇದ್ದ ಅನ್ಯಜನರ ಅತಿ ಶ್ರೇಷ್ಠ ಶಕ್ತಿಯ ಪ್ರತಿನಿಧಿಗಳ ಎದುರು ಒಬ್ಬನೇ ಮತ್ತು ಪ್ರತಿವಾದಿಸದೆ ನಿಲ್ಲಬೇಕಾಯಿತು. ಆತನ ಪರ ವಹಿಸಲು ಒಬ್ಬ ವ್ಯಕ್ತಿಯೂ ಮುಂದೆ ಬರಲಿಲ್ಲ. ಯೂದನು ಆತನನ್ನು ವಂಚನೆಯಿಂದ ಬಿಟ್ಟುಕೊಟ್ಟನು; ಪೇತ್ರನು ಆತನನ್ನು ಆಣೆಗಳೊಂದಿಗೆ ಗುರುತಿಸಲು ನಿರಾಕರಿಸಿದನು; ಮತ್ತು ಇತರ ಶಿಷ್ಯರು "ಆತನನ್ನು ಬಿಟ್ಟು ಓಡಿಹೋದರು" (ಮತ್ತಾಯ 26:56). ಮತ್ತು ಆತನ ಬೋಧನೆಯ ಸಮಯದಲ್ಲಿ, ಆತನ ಸೇವೆ ಮಾಡಿದ್ದ ಹಲವಾರು ಹೆಂಗಸರು, ಆತನನ್ನು ಶಿಲುಬೆಗೇರಿಸಿದಾಗ, "ದೂರದಿಂದ ನೋಡುತ್ತಿದ್ದರು" (ಮತ್ತಾಯ 27:55). ಆತನ ಅಗತ್ಯತೆಯ ಸಮಯದಲ್ಲಿ, ಮಾನವನಾಗಿ ಹೇಳುವುದಾದರೆ, ಯಾರೊಬ್ಬ ವ್ಯಕ್ತಿಯೂ ಆತನಿಗೆ ಬೆಂಬಲ ನೀಡಲಿಲ್ಲ. ನಿಜ, ನಂತರ, ಸಂಕಟದ ಬಳಲಿಕೆಯ ಗಂಟೆಗಳು ಆತನ ಮುರಿದು ಹೋದ ದೇಹವನ್ನು ನಿಶ್ಚೇಷ್ಟಿತಗೊಳಿಸಿದ ನಂತರ, ಆತನ ತಾಯಿ ಮರಿಯ, ಕೆಲವು ನಿಷ್ಠಾವಂತ ಸ್ತ್ರೀಯರು, ಮತ್ತು ಆತನ ಪ್ರಿಯ ಶಿಷ್ಯನಾದ ಯೋಹಾನನು, ಶಿಲುಬೆಯ "ಹತ್ತಿರ ನಿಂತರು"; ಆದರೆ ಆತನ ವಿಚಾರಣೆಯ ಸಮಯದ-

*(ಪುಟ 6ರಲ್ಲಿ ಮುಂದುವರಿದಿದೆ)*

## ಉದ್ಧಾರಕ (ದ ಮೆಸ್ಸಾಯ)

*(ಪುಟ 5 ರಿಂದ ಮುಂದುವರಿದಿದೆ)*

ಲ್ಲಿ ಮತ್ತು ಆತನನ್ನು ಶಿಲುಬೆಗೇರಿಸಿದ ಮೊದಲ ಕೆಲವು ಗಂಟೆಗಳಲ್ಲಿ, ಆತನನ್ನು ಒಂಟಿಯಾಗಿ ಬಿಡಲಾಯಿತು - ಸಂಪೂರ್ಣವಾಗಿ ಏಕಾಂಗಿಯಾಗಿದ್ದರು. ಜಗತ್ತಿನ ಇತಿಹಾಸದಲ್ಲಿ ಎಂದೂ ಯಾರೂ ಗೆಳೆಯರಿಂದ ಮತ್ತು ಪ್ರೀತಿಪಾತ್ರರಿಂದ ಯೇಸುವಿನಂತೆ ತೊರೆಯಲ್ಪಟ್ಟಿಲ್ಲ.

ಯೇಸು ಬಂಧಿಸಲ್ಪಟ್ಟರು, ಸರಿಯಾದ ಅಧಿಕಾರಿಗಳಿಂದಲ್ಲ, ಆದರೆ ಜನಸ್ತೋಮದಿಂದ, ದೊಂಬಿಯಿಂದ: "ಮಹಾಯಾಜಕರು ಜನರ ಹಿರಿಯರು ಇವರ ಕಡೆಯಿಂದ ಬಹು ಜನರ ಗುಂಪು ಕತ್ತಿ ದೊಣ್ಣೆಗಳನ್ನು ಹಿಡಿದುಕೊಂಡು" (ಮತ್ತಾಯ 26:47). ಅವರ ಮಾರ್ಗದ ಅಸಾಮಂಜಸ್ಯವನ್ನು ಯೇಸು ಕೂಡ ಟೀಕಿಸಿದರು: "ಕಳ್ಳನನ್ನು ಹಿಡಿಯುವದಕ್ಕೆ ಬಂದಂತೆ ಕತ್ತಿಗಳನ್ನೂ ದೊಣ್ಣೆಗಳನ್ನೂ ತೆಗೆದುಕೊಂಡು ನನ್ನನ್ನು ಹಿಡಿಯುವದಕ್ಕೆ ಬಂದಿರಾ? ನಾನು ದಿನಾಲೂ ದೇವಾಲಯದಲ್ಲಿ ಕೂತುಕೊಂಡು ಬೋಧಿಸುತ್ತಿದ್ದಾಗ ನೀವು ನನ್ನನ್ನು ಹಿಡಿಯಲಿಲ್ಲ; ಆದರೆ ಪ್ರವಾದಿಗಳು ಬರೆದ ವಚನಗಳು ನೆರವೇರುವಂತೆ ಇದೆಲ್ಲಾ ಆಯಿತು" (ಮತ್ತಾಯ 26:55-56).

"ಯೇಸುವನ್ನು ಕೊಲ್ಲಿಸಬೇಕೆಂದು" (ಮತ್ತಾಯ 26:59) ಆತನ ವಿರುದ್ಧ ಸಾಕ್ಷಿ ಹೇಳಲು ಸುಳ್ಳು ಸಾಕ್ಷಿಗಳನ್ನು ಚಿತಾಯಿಸಲಾಯಿತು, ಮತ್ತು ಆತನ ವಿಚಾರಣೆಯನ್ನು ರಾತ್ರಿ ವೇಳೆ ನಡೆಸಲಾಯಿತು, ಅದು ಕಾನೂನುಬಾಹಿರವಾಗಿತ್ತು.

ರೋಮಾಪುರದ ನ್ಯಾಯಾಲಯದಲ್ಲಿ, ಆತನನ್ನು ನ್ಯಾಯಸಮ್ಮತವಾಗಿ ದೂಷಿಸಲು ಒಂದು ಕಾರಣಕ್ಕಾಗಿ ಪಿಲಾತನು ವ್ಯರ್ಥವಾಗಿ ಹುಡುಕಿದಾಗ, ಅವನು ಜನರನ್ನು, "ಯಾಕೆ? ಕೆಟ್ಟದ್ದೇನು ಮಾಡಿದನು?" ಎಂದು ಕೇಳಿದಾಗ, ಅವನಿಗೆ ಸಿಕ್ಕ ಉತ್ತರಗಳು ಕೇವಲ ಅವರ ನಾಯಕರಿಂದ ಪ್ರೇರಿತರಾದ ಜನಸ್ತೋಮದ ವಿಚಾರಹೀನ ಕೂಗಾಟಗಳಾಗಿದ್ದವು, "ಶಿಲುಬೆಗೆ ಹಾಕಿಸು....ಶಿಲುಬೆಗೆ ಹಾಕಿಸು" (ಮತ್ತಾಯ 27:23) ಎಂಬುದು. ನಂತರ ವಿವೇಚನೆಯ ಮತ್ತು ನ್ಯಾಯದ ಮಾತುಗಳು ಏನನ್ನೂ ಗೆಲ್ಲುವುದಿಲ್ಲ ಮತ್ತು ಹೆಚ್ಚು ಭೀಕರವಾದ "ಗಲಭೆ" ಪ್ರಾರಂಭವಾಗುತ್ತಿದೆ ಎಂದು ಪಿಲಾತನು ಕಂಡಾಗ, ಜನರ ಮುಂದೆ ಕೈ ತೊಳಕೊಂಡು ದುರ್ಬಲನಾಗಿ ಈ ವಿಷಯವನ್ನು ಕೈಬಿಟ್ಟು, ಅವರು ಆತನನ್ನು ಶಿಲುಬೆಗೇರಿಸಲು ಸಾಧ್ಯವಾಗುವಂತೆ, ಆತನನ್ನು ಅವರಿಗೆ ಒಪ್ಪಿಸಿದನು (ಮತ್ತಾಯ 27:22-26). ಇದು ಚರಿತ್ರೆಯ ಪುಟಗಳಲ್ಲಿ ಅತ್ಯಂತ ಕೆಟ್ಟ ನ್ಯಾಯಪಾತವಾಗಿತ್ತು.

ಆದರೆ ಕ್ರಿಸ್ತರ ನಿರಪರಾಧಿತ್ವವು ಕೇವಲ ಪಿಲಾತನಿಂದ ಮಾತ್ರವಲ್ಲ - "ನನಗೆ ಅವನಲ್ಲಿ ಅಪರಾಧವು ಕಾಣಿಸಲಿಲ್ಲ" (ಯೋಹಾನ 19:6) - ಉದ್ಧಾರಕನ ಹಿಂದಿನ ಪ್ರವಾದಿಯಿಂದಲೂ ನಿಜವೆಂದು ದೃಢೀಕರಿಸಲ್ಪಟ್ಟಿತ್ತು: "ಅವನು ಯಾವ ಅನ್ಯಾಯವನ್ನು ಮಾಡದಿದ್ದರೂ, ಅವನ ಬಾಯಲ್ಲಿ ಯಾವ ವಂಚನೆಯು ಇಲ್ಲದಿದ್ದರೂ" (ಯೆಶಾಯ 53:9).

*ಸುದ್ದಿಪತ್ರಿಕೆ ಸಂಪುಟ 06100 ಯಲ್ಲಿ ಮುಂದುವರಿದಿದೆ*

## ಜಾಂಬಿಯ

ಪ್ರೀತಿಯ ಪ್ಯಾಸ್ಟರ್ ಟೋನಿ ಅಲಾಮೊ,

ನಿಮಗೆ ಈ ಪತ್ರ ಬರೆಯಲು ನನಗೆ ಬಹಳ ಸಂತೋಷವಾಗುತ್ತಿದೆ. ನೀವು ಹೇಗಿದ್ದೀರಿ, ಪ್ಯಾಸ್ಟರ್? ಸರ್ವಶಕ್ತನಾದ ದೇವರ ದಯೆಯಿಂದ ನೀವು ಚೆನ್ನಾಗಿದ್ದೀರಿ ಎಂದು ನಾನು ನಿರೀಕ್ಷಿಸುತ್ತೇನೆ. "ನಾಯಕರು ಮತ್ತು ಕಟ್ಟುಕಥೆಗಳು" ಎಂಬ ನಿಮ್ಮ ವಿಶ್ವ ಸುದ್ದಿಪತ್ರಿಕೆಯನ್ನು ನಾನು ಓದಿದೆನು, ಅದು ಪವಾಡಸದೃಶವಾಗಿ ನನಗೆ ಸಿಗುವಂತೆ ದೇವರು ಮಾಡಿದರು. ಅದನ್ನು ಓದಿದ ನಂತರ, ನಾನು ಬಹಳ ಅನುಗ್ರಹಿತನಾದೆನು, ಮತ್ತು ನಿಮಗೆ ಬರೆಯಲು ಬಯಸಿದೆನು. ಕಳೆದುಹೋದವರಿಗೆ ಮತ್ತು ರಕ್ಷಿತರಲ್ಲದವರ ಬದುಕುಗಳಲ್ಲಿ ಕ್ರಿಸ್ತರು ರೂಪುಗೊಳ್ಳಲು ಸಾಧ್ಯವಾಗುವಂತೆ ಮಾಡುವ ನಿಮ್ಮ ಅದ್ಭುತ ಸಂದೇಶಗಳಿಗಾಗಿ ನಾನು ನಿಮಗೆ ಕೃತಜ್ಞತೆ ಸಲ್ಲಿಸುತ್ತೇನೆ. ನಿಮ್ಮ ಸಾಹಿತ್ಯದ ಮೂಲಕ, ಹಲವಾರು ಜನರು ಕ್ರಿಸ್ತರನ್ನು ಪಡೆದಿದ್ದಾರೆ, ಮತ್ತು ಸೈತಾನನಿಂದ ಮುಕ್ತರಾಗಿದ್ದಾರೆ. ದೇವರು ನಿಮಗೆ ಆರ್ಥಿಕವಾಗಿ, ದೈಹಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಅನುಗ್ರಹಿಸಲಿ.

ಪ್ಯಾಸ್ಟರ್, ನಾನೊಬ್ಬ ಯುವತಿ, ಐದು ವರ್ಷಗಳ ಹಿಂದೆ ಮದುವೆ ಆಯಿತು. ನಾನು ಎರಡು ವರ್ಷಗಳ ಹಿಂದೆ ನನ್ನ ಬದುಕನ್ನು ಯೇಸು ಕ್ರಿಸ್ತರಿಗೆ ಸಮರ್ಪಿಸಿದೆನು, ಮತ್ತು ಪ್ರಭು ನನಗೆ ದಯೆ ತೋರಿದ್ದಾರೆ. ಇತರರಿಗೆ ಯೇಸುವಿನ ನಿಜ ಸುವಾರ್ತೆಯನ್ನು ಉಪದೇಶಿಸಬೇಕೆಂಬ ಯೋಜನೆಯೊಂದನ್ನು ನಾನು ಹೊಂದಿದ್ದೇನೆ. ಆಫ್ರಿಕದಲ್ಲಿನ ಮಹಿಳೆಯರಂತೆಯೇ, ಸಾಂಪ್ರದಾಯಿಕ ಕಟ್ಟುಕಥೆಗಳ ಕಾರಣ ಹಲವಾರು ಶತಮಾನಗಳಿಂದ ನಮ್ಮನ್ನು ಬಂಧಿಸಿಡಲಾಗಿದೆ, ಆದ್ದರಿಂದ ನಾನು ನನ್ನನ್ನು ಪ್ರಭುವಿಗೆ ಸಮರ್ಪಿಸಿಕೊಳ್ಳಬೇಕೆಂದು ನಿಜವಾಗಿಯೂ ಬಯಸುತ್ತೇನೆ. ಪ್ಯಾಸ್ಟರ್, ನಾನು ಕಳೆದುಹೋದ ಆತ್ಮಗಳಲ್ಲಿಗೆ ಹೋಗಿ ಸಾಕ್ಷಿಯಾಗುವಲ್ಲಿ ನೆರವಾಗಲು ಬೈಬಲ್‌ಗಳನ್ನು, ಪುಸ್ತಕಗಳನ್ನು, ಸುದ್ದಿಪತ್ರಿಕೆಗಳನ್ನು, ಟೇಪ್‌ಗಳಲ್ಲಿ ದೇವ ಸಂದೇಶಗಳು, ಮತ್ತು ಇನ್ನೂ ಹೆಚ್ಚಿನ ಸಾಹಿತ್ಯಗಳನ್ನು ಕೋರುತ್ತಿದ್ದೇನೆ. ಕೊನೆಯದಾಗಿ, ಬೈಬಲ್ ಅಧ್ಯಯನಕ್ಕಾಗಿ ಸಾಮಗ್ರಿಗಳನ್ನು ಮತ್ತು ಟೇಪ್‌ಗಳ ಮೇಲೆ ಹಾಡುಗಳನ್ನು ಕೋರಲು ನಾನು ಇಷ್ಟಪಡುತ್ತೇನೆ. ಕ್ರಿಸ್ತರಲ್ಲಿ ನಿಮ್ಮ,

ಎಲ್.ಎಮ್. ಇಸೋಕ, ಜಾಂಬಿಯ

---

ಪ್ರೀತಿಯ ಪ್ಯಾಸ್ಟರ್ ಟೋನಿ ಅಲಾಮೊ,

ನಮ್ಮ ಪ್ರಭು ಯೇಸು ಕ್ರಿಸ್ತರ ಹೆಸರಿನಲ್ಲಿ ನನ್ನ ಸಂತೋಷದ ಮತ್ತು ಹೃತ್ಪೂರ್ವಕ ಶುಭಾಶಯಗಳು. ನಿಮ್ಮ ಬದುಕಿಗಾಗಿ ಮತ್ತು ಜೀವಗಳು ರಕ್ಷಣೆಯಾಗಲು ಸಾಧ್ಯವಾಗುವಂತೆ ಜಗತ್ತಿನ ಮೂಲೆ-ಮೂಲೆಗಳಿಗೆ ದೇವರ ಪದವು ತಲುಪಲು ಸಾಧ್ಯವಾಗುವಂತೆ ಅದನ್ನು ಅತ್ಯುತ್ತಮವಾಗಿ ಹರಡಲು ಆತ ಬಳಸಲು ಯೋಜಿಸಿರುವ ರೀತಿಗಾಗಿ ನಾನು ದೇವರಿಗೆ ಕೃತಜ್ಞನಾಗಿದ್ದೇನೆ. ಪ್ಯಾಸ್ಟರ್ ಅಲಾಮೊ, ಸರ್, ದುಷ್ಟ ವಿಚಾರಗಳಿಂದ ನನ್ನ ಒಬ್ಬ ಸಹ ಕೆಲಸಗಾರ ನನ್ನನ್ನು ರಕ್ಷಿಸುವ ಮೊದಲು ನಾನೊಬ್ಬ ಪಾಷಂಡಿ ಆಗಿದ್ದೆ, ಮತ್ತು ಸುದ್ದಿಪತ್ರಿಕೆಯಲ್ಲಿ ನಾನು ನಿಮ್ಮ ಸಂದೇಶವನ್ನು ಓದಿದಾಗ, ಅದು ನನ್ನ ಹೃದಯವನ್ನು ಸರಿಯಾದ ದಾರಿಗೆ ತಂದಿತು, ಮತ್ತು ದೇವರು ನನ್ನ ಬದುಕನ್ನು ಬದಲಾಯಿಸುತ್ತಿದ್ದಾರೆ ಎಂದು ನನಗೆ ಖಚಿತವಾಗಿದೆ. ನಾವು ನಮ್ಮೊಳಗೆ ಆತನ ನೀತಿನಿಷ್ಠೆಯನ್ನು ತುಂಬಿಕೊಳ್ಳಬೇಕೆಂದು ದೇವರು ಬಯಸುತ್ತಾರೆ ಎಂದು ನನಗೆ ಬೇಗನೆ ಅರ್ಥವಾಗುತ್ತದೆ. ಪ್ಯಾಸ್ಟರ್ ಅಲಾಮೊ, ಸರ್ವಶಕ್ತನಾದ ದೇವರ ಪದವನ್ನು ಓದುವುದಕ್ಕಾಗಿ ನಾನು ನನ್ನ ಗೆಳೆಯನಿಗಾಗಿ ಮತ್ತು ನನಗಾಗಿ ಇಂಗ್ಲಿಷ್‌ನಲ್ಲಿ ಒಂದು ಅಥವಾ ಎರಡು ಬೈಬಲ್‌ಗಳನ್ನು ಕೋರುತ್ತಿದ್ದೇನೆ. ನಿಮ್ಮ ಕೃಪೆಗಾಗಿ ಮತ್ತು ಕೋರಿಕೆಗಳನ್ನು ಪೂರೈಸುವ ಪರಹಿತ ಚಿಂತನೆಯುಳ್ಳ ವ್ಯಕ್ತಿಗೆ ನನ್ನ ಅನಂತಾನಂತ ಧನ್ಯವಾದಗಳು. ಧನ್ಯವಾದಗಳು.

ಜಿ. ಎನ್. ಕಿಟ್ವೆ, ಜಾಂಬಿಯ

## ಮೆಕ್ಸಿಕೊ

ಬಹು ಮೆಚ್ಚುಗೆಯ ಪ್ಯಾಸ್ಟರ್ ಅಲಾಮೊ,

ಜಗತ್ತಿನ ವಿವಿಧ ಭಾಗಗಳಿಂದ ಬಹಳ ಆಸಕ್ತಿಕರವಾದ ಸಂದೇಶಗಳನ್ನು ಮತ್ತು ಸಾಕ್ಷಿಗಳನ್ನು ಹೊಂದಿರುವ ನಿಮ್ಮ ಸಾಹಿತ್ಯವು ನಾನಿರುವ ಜಾಗವನ್ನೂ ತಲುಪಿದೆ. ನಿಸ್ಸಂದೇಹವಾಗಿ, ರಕ್ಷಣೆಯ ತನ್ನ ಸಂದೇಶವನ್ನು ಪ್ರತಿಯೊಬ್ಬ ಮನುಷ್ಯನಿಗೆ ತರಲು ಸಾಧ್ಯವಾಗುವಂತೆ ದೇವರು ನಿಮ್ಮನ್ನು ಶಕ್ತಿಯುತವಾಗಿ ಬಳಸುತ್ತಿದ್ದಾರೆ. ನಾನು ಗಾಂಜಾ ಸಾಗಣೆಗಾಗಿ ಏಳೂವರೆ ವರ್ಷಗಳಿಂದ ಕಾರಾಗೃಹದಲ್ಲಿದ್ದೇನೆ. ಇಲ್ಲಿರುವ ಕಳೆದ ಎರಡು ವರ್ಷಗಳ ಅವಧಿಯಲ್ಲಿ, ದೇವರು ನನ್ನ ದರಿದ್ರ ಅಸ್ತಿತ್ವದಲ್ಲಿ ಒಂದು ಅದ್ಭುತವಾದ ರೀತಿಯಲ್ಲಿ ಪ್ರತ್ಯಕ್ಷವಾದರು. ನಾನು ಈ ವರ್ಷ ಬಿಡುಗಡೆಯಾಗುವ ನಿರೀಕ್ಷೆ ಇದೆ, ಮತ್ತು ನನ್ನ ಗಂಡು ಮಕ್ಕಳ ಮತಾಂತರಕ್ಕಾಗಿ ನೆರವಾಗಬಲ್ಲ ಉದ್ಧಾರಕ (ದ ಮೆಸ್ಸಾಯ) ಎಂಬ ನಿಮ್ಮ ಪುಸ್ತಕವನ್ನು ಮತ್ತು ಇತರ ಸಾಹಿತ್ಯಗಳನ್ನು ನೀವು ನನಗೆ ಕಳುಹಿಸಿಕೊಡಬಹುದೆ ಎಂದು ತಿಳಿದುಕೊಳ್ಳಲು ಇಷ್ಟಪಡುತ್ತೇನೆ.

ಎಮ್. ಎ. ಮಾನ್‌ಕ್ಲೋವ, ಕೊಅಉಯಿಲ, ಮೆಕ್ಸಿಕೊ

# ಪ್ಯಾಸ್ಟರ್ ಅಲಾಮೊ ಅವರಿಗೆ ಪತ್ರಗಳು

## ಘಾನ

ಅಚ್ಚುಮೆಚ್ಚಿನ ಮತ್ತು ಒಲವಿನ ಪ್ಯಾಸ್ಟರ್,

ನೀವು ನಿಮ್ಮ ಸುದ್ದಿಪತ್ರಿಕೆಗಳನ್ನು ಕಳುಹಿಸಿದ್ದೀರಿ ಎಂದು ನಾನು ಬಹಳ ಉತ್ಸಾಹಗೊಂಡಿದ್ದೆನು. ಕಳೆದ ವಾರ ನನ್ನ ಬಳಿ ನಿಮ್ಮ ಸುದ್ದಿಪತ್ರಿಕೆಗಳ ಒಂದು ಡಬ್ಬಿ ಇತ್ತು. ಪ್ರಭುವಿನ ಪ್ರೀತಿಯ ಸೇವಕನೆ, ಅದನ್ನು ಓದಲು ಜನರು ಬಹಳ ಇಷ್ಟಪಟ್ಟರು. ನಾವು ಯಾರೊಂದಿಗೆ ಯಾವಾಗಲೂ ನಮ್ಮ ಉಡುಗೊರೆಗಳನ್ನು ಹಂಚಿಕೊಳ್ಳುತ್ತೇವೋ ಮತ್ತು ಪ್ರಾರ್ಥನಾ ಸಭೆಗಳಿಗಾಗಿ ಭೇಟಿ ಕೊಡುತ್ತೇವೋ, ಹಳ್ಳಿಯಲ್ಲಿನ ನಮ್ಮ ಆ ಗೆಳೆಯರು ಅವನ್ನು ಓದಲು ಬಹಳ ಕಾತರದಿಂದಿದ್ದರು ಮತ್ತು ಇತರರಿಂದ ಆ ಪತ್ರಗಳನ್ನು ಓದಿ ಕೆಲವು ಆತ್ಮಗಳು ಪುನರುತ್ಥಾನಗೊಂಡವು. ನಮಗೆ ಬಹಳ ಸಂತೋಷವಾಗಿದೆ ಮತ್ತು ನಮಗೆ ಸುವಾರ್ತೆಯ ಸಾಮಗ್ರಿಗಳನ್ನು ಕಳುಹಿಸಲು ನಮ್ಮನ್ನು ನಿಮ್ಮ ಮೇಲಿಂಗ್ ಪಟ್ಟಿಯಲ್ಲಿ ಹಾಕಿಕೊಳ್ಳಲು ನಾವು ನಿಮ್ಮನ್ನು ಕೋರುತ್ತೇವೆ. ನಮಗೆ ಕೆಲವು ಬೈಬಲ್‌ಗಳು, ನಿಮ್ಮ ಸಾಹಿತ್ಯಗಳು ಬೇಕಾಗಿವೆ, ಮತ್ತು ನಿಮ್ಮ ಮಿನಿಸ್ಟ್ರಿಯಿಂದ ಬೋಧನೆಗಳನ್ನು ಪಡೆಯಲು ನಮಗೆ ಸಂತೋಷವಾಗುತ್ತದೆ. ನಿಮಗಾಗಿ, ನಿಮ್ಮ ಪ್ರೀತಿಯ ಮಗ, ಸಿಯಾನ್‌ಗಾಗಿ, ಮತ್ತು ನಿಮ್ಮ ಮಿನಿಸ್ಟ್ರಿಯಲ್ಲಿ ನಿಮ್ಮೊಂದಿಗೆ ಕೆಲಸ ಮಾಡುವ ಎಲ್ಲರಿಗಾಗಿ ನಾವು ಪ್ರಾರ್ಥಿಸುತ್ತೇವೆ. ದೇವರು ನಿಮ್ಮನ್ನು ಸಮೃದ್ಧವಾಗಿ ಅನುಗ್ರಹಿಸಲಿ. ಮೊದಲನೆಯದಾಗಿ ಮತ್ತು ಎಲ್ಲಾ ರೀತಿಗಳಲ್ಲಿ ನಮಗಾಗಿ ಪ್ರಾರ್ಥಿಸಿರಿ. ಪ್ರಾರ್ಥನೆಯು ಸರ್ವಶಕ್ತನಾದ ದೇವರ ಶಕ್ತಿಶಾಲಿ ಕೈಯನ್ನು ನಡೆಸುತ್ತದೆ. ಪ್ರಾರ್ಥನೆ ಇಲ್ಲದೆ, ನಾವು ಕೇವಲ "ನಮ್ಮ ಚಕ್ರಗಳನ್ನು ತಿರುಗಿಸುತ್ತಿದ್ದೇವೆ". ಪ್ರಭುವಿನ ಕೆಲಸಕ್ಕಾಗಿ ದೂರದ ಹಳ್ಳಿಗಳಿಗೆ ಮತ್ತು ಬೆಟ್ಟಗಳಿಗೆ ಹೋಗುವ ನಮ್ಮ ವಿದ್ಯಾರ್ಥಿ ಸ್ವಯಂಸೇವಕರಿಗಾಗಿ ದಯವಿಟ್ಟು ಪ್ರಾರ್ಥಿಸಿ. ಅವರಲ್ಲಿ ಧೈರ್ಯ, ಮತ್ತು ನಿಷ್ಠೆ ಮತ್ತು ಪ್ರೀತಿ ಇರುವಂತೆ ಅವರಿಗಾಗಿ ಪ್ರಾರ್ಥಿಸಿ. ಪ್ರಭುವಿನ ಪವಿತ್ರಾತ್ಮವು ನಿಮ್ಮ ಮಾರ್ಗದರ್ಶಿ ಮತ್ತು ನಾಯಕನಾಗಿರಲಿ. ನಿಮ್ಮನ್ನು ಸಮೃದ್ಧವಾಗಿ ಅನುಗ್ರಹಿಸಲು ಆತನಿಗೆ ನೆನಪಿರಲಿ. ನಿಮಗೆ ದೀರ್ಘಾಯುಷ್ಯ, ಶಾಂತಿ ಮತ್ತು ಸಮೃದ್ಧಿ ಇರಲಿ ಎಂದು ನಾವು ದೇವರಲ್ಲಿ ಪ್ರಾರ್ಥಿಸುತ್ತೇವೆ.

ಕ್ರಿಸ್ತರ ಪ್ರೀತಿಯಲ್ಲಿ ನಿಮ್ಮನ್ನು ಪ್ರೀತಿಸುವ,

ಎ.ಎಸ್. ಅಕ್ರಾ, ಘಾನ

---

## ಟೋಗೊ

ಕ್ರಿಸ್ತರ ಪ್ರಿಯರೇ,

ನಿಮ್ಮ ಪತ್ರ ಪಡೆಯಲು ನಮಗೆ ಬಹಳ ಸಂತೋಷವಾಗಿದೆ. ನೀವು ಕಳುಹಿಸಿರುವ ಸಾಹಿತ್ಯದ ಬಗ್ಗೆ ನಮಗೆ ಬಹಳ ಸಂತೋಷವಾಗಿದೆ. ನಿಮ್ಮ ಕಿರುಪುಸ್ತಕಗಳ ಮೂಲಕ ಕ್ರಿಸ್ತರ ಬಳಿ ಬಂದ ಸುಮಾರು 15 ಆತ್ಮಗಳನ್ನು ನಾವು ಗೆದ್ದಿದ್ದೇವೆ ಮತ್ತು ದೇವರು ನಿಮ್ಮೆಲ್ಲರನ್ನು ಸಮೃದ್ಧವಾಗಿ ಆಶೀರ್ವದಿಸಲಿ ಎಂದು ನಾವು ಪ್ರಾರ್ಥಿಸುತ್ತಿದ್ದೇವೆ.

ಸಿಡಿಗಳ ಬಗ್ಗೆ ಹೇಳುವುದಾದರೆ, ಹೊಸದಾಗಿ ಮತಾಂತರಗೊಂಡಿರುವವರಿಗಾಗಿ, ಅವುಗಳ ಮತ್ತು ಬೈಬಲ್‌ಗಳ ಅವಶ್ಯಕತೆ ಇರುತ್ತದೆ. ಈಗಿನ ಪರಿಸ್ಥಿತಿಯಲ್ಲಿ ನಾವು ಅವುಗಳನ್ನು ಹಣ ತೆತ್ತು ಕೊಂಡುಕೊಳ್ಳಲು ಸಾಧ್ಯವಿಲ್ಲ. ಟೋಗೊ ಬಹಳ ಬಡ ದೇಶವಾಗಿದೆ.

ಈಸ್ಟರ್ ಕೂಟಕ್ಕಾಗಿ ಸಿಡಿಗಳನ್ನು ಮತ್ತು ಬೈಬಲ್‌ಗಳನ್ನು ಪಡೆಯಲು ನಾವು ಎದುರು ನೋಡುತ್ತಿರುತ್ತೇವೆ.

ರೆವರೆಂಡ್ ಹೆನ್ರಿ ಜೇಮ್ಸ್

ಲೋಮ್, ಟೋಗೊ

## ನೈಜೀರಿಯ

ಪ್ರಿಯ ಪ್ಯಾಸ್ಟರ್,

ಪ್ರಭು ಯೇಸು ಕ್ರಿಸ್ತರ ಹೆಸರಿನಲ್ಲಿ ನಿಮಗೆ ಶುಭಾಶಯಗಳು. ಆಮೆನ್. ನೀವು ನನಗೆ ಕಳುಹಿಸಿದ ಹಿಂದಿನ ಸುದ್ದಿಪತ್ರಿಕೆಗಳನ್ನು ಹಂಚಲಾಗಿದೆ, ಮತ್ತು ಜನರ ಬದುಕುಗಳಲ್ಲಿ ಅದು ತರುತ್ತಿರುವ ಬದಲಾವಣೆಗಳನ್ನು ನೋಡಿ ನನಗೆ ಆಶ್ಚರ್ಯವಾಯಿತು, ಮತ್ತು ಜನರು ಸಂಪೂರ್ಣ ಹೃದಯದಿಂದ ಪ್ರಭುವಿನ ಸೇವೆ ಮಾಡುವ ಭರವಸೆ ನೀಡುತ್ತಿದ್ದಾರೆ, ಮತ್ತು ಕೆಲವರು ನಿಮಗೆ ಬರೆಯುವ ಭರವಸೆ ನೀಡಿದ್ದಾರೆ. ನಾನು ಉದ್ಧಾರಕ (ದ ಮೆಸ್ಸಾಯ) ಪುಸ್ತಕದ 25 ಪ್ರತಿಗಳನ್ನು ಮತ್ತು ನಿಮ್ಮ ವಿವಿಧ ಸುದ್ದಿಪತ್ರಿಕೆಗಳ 150 ಪ್ರತಿಗಳನ್ನು, ಕೆಲವು ಬೈಬಲ್‌ಗಳನ್ನು, ಮತ್ತು ನನ್ನ ಸುವಾರ್ತಾ ಬೋಧನೆ ಹಂಚಿಕೆಯಲ್ಲಿ ನನಗೆ ನೆರವಾಗಲು ಮತ್ತು ಪ್ರಭು ಯೇಸು ಕ್ರಿಸ್ತರ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಬಯಸುವ ಗೆಳೆಯರಿಗಾಗಿ, ಕುಟುಂಬದ ಸದಸ್ಯರಿಗಾಗಿ ಮತ್ತು ಆಸಕ್ತಿ ಇರುವ ಇತರ ಜನರಿಗಾಗಿ ಯಾವುದೇ ಇತರ ಸಾಹಿತ್ಯವನ್ನು ಕಳುಹಿಸಲು ಕೋರಲು ಬಯಸುತ್ತೇನೆ. ನಾನು ನಿಜವಾಗಿಯೂ ಇಲ್ಲಿ ನೈಜೀರಿಯದಲ್ಲಿ ನಿಮ್ಮ ಮಿನಿಸ್ಟ್ರಿಗಳಲ್ಲಿ ಒಬ್ಬನಾಗಲು ಬಯಸುತ್ತೇನೆ. ಅದಕ್ಕಾಗಿ ಏನು ಮಾಡಬೇಕೆಂದು ತಿಳಿದುಕೊಳ್ಳಲು ಬಯಸುತ್ತೇನೆ. ದೇವರ ಕೈ ನಿಮ್ಮ ಬದುಕು ಮತ್ತು ಮಿನಿಸ್ಟ್ರಿಯ ಮೇಲಿರುವುದನ್ನು ನಾನು ನೋಡಿದ್ದೇನೆ, ಮತ್ತು ನಿಮ್ಮ ಮತ್ತು ನಿಮ್ಮ ಮಿನಿಸ್ಟ್ರಿ ಮೇಲಿರುವ ಆ ಆಶೀರ್ವಾದ ಮತ್ತು ದಯೆಯನ್ನು ಪಡೆಯಲು ಬಯಸುತ್ತೇನೆ. ನಿಮ್ಮಿಂದ ಕೇಳಲು ಮತ್ತು ಪಡೆಯಲು ನಿರೀಕ್ಷೆಯಿಂದ ಕಾಯುತ್ತಿರುವೆನು.

ಪ್ರಭುವಿನಲ್ಲಿ ನಿಮ್ಮವನಾದ,

ಆರ್.ಎಮ್. ಪೋರ್ಟ್ ಹಾರ್ಕೋರ್ಟ್, ನೈಜೀರಿಯ

---

ಪ್ರಿಯ ಪ್ಯಾಸ್ಟರ್ ಟೋನಿ,

ನಿಮ್ಮ ಪುಸ್ತಕ, ಉದ್ಧಾರಕ (ದ ಮೆಸ್ಸಾಯ), ಹಾಗೂ ಹತ್ತು ಸುದ್ದಿಪತ್ರಿಕೆಗಳನ್ನು ನನಗೆ ಕಳುಹಿಸಿದ್ದಕ್ಕಾಗಿ ಧನ್ಯವಾದಗಳು. ಆ ಸಾಮಗ್ರಿಗಳು ಆಧ್ಯಾತ್ಮಿಕ ಅರಿವನ್ನು ಮತ್ತು ನನ್ನ ಬದುಕಿನಲ್ಲಿ ದೇವರ ಕೆಲಸಕ್ಕಾಗಿ ಒಂದು ಹೊಸ ಹುರುಪನ್ನು ತಂದಿವೆ. ನಾನು ಕೆಲವು ಸುದ್ದಿಪತ್ರಿಕೆಗಳನ್ನು ನಂಬಿಕೆಯಲ್ಲಿ ತಣ್ಣಗಾಗಿ ಹೋಗಿದ್ದ ಕೆಲವು ಕ್ರೈಸ್ತಮತೀಯ ಗೆಳೆಯರಿಗೆ ಕೊಟ್ಟೆನು, ಮತ್ತು ನಾನು ಅವರನ್ನು ಭೇಟಿಯಾದಾಗ, ಅವರೆಲ್ಲರೂ ಮಹದಾನಂದವನ್ನು ವ್ಯಕ್ತಪಡಿಸಿದರು. ಏಕೆಂದರೆ ಅವರೆಲ್ಲರೂ ಆತ್ಮದಲ್ಲಿ ಪುನರುತ್ಥಾನಗೊಂಡಿದ್ದಾರೆ ಮತ್ತು ನಿಮ್ಮ ಸುದ್ದಿಪತ್ರಿಕೆಗಳನ್ನು ಓದುವುದರ ಪರಿಣಾಮವಾಗಿ ಚೆನ್ನಾಗಿದ್ದಾರೆ. ಈ ಜನರು ಆ ಸುದ್ದಿಪತ್ರಿಕೆಗಳಿಗಾಗಿ ಹಾತೊರೆಯುತ್ತಿದ್ದಾರೆ, ಆದ್ದರಿಂದ ದಯವಿಟ್ಟು ನನಗೆ ಸುಮಾರು 150 ಸುದ್ದಿಪತ್ರಿಕೆಗಳನ್ನು ಮತ್ತು ಹೊಸದಾಗಿ ಮತಾಂತರಗೊಂಡಿರುವವರಿಗೆ ಹೆಚ್ಚಿನ ಅಗತ್ಯವಿರುವ ಕೆಲವು ಬೈಬಲ್‌ಗಳನ್ನು ಕಳುಹಿಸಿಕೊಡಿ. ನೀವು ನನಗೆ ಅವನ್ನು ಕಳುಹಿಸುವುದಕ್ಕೆ ನಾನು ನಿಮಗೆ ಬಹಳ ಕೃತಜ್ಞನಾಗಿದ್ದೇನೆ. ನೀವು ನಿಷ್ಠಾವಂತರಾಗಿ ನೀಡುತ್ತಿರುವ ದೇವರ ಪದದ ಸಮೃದ್ಧ ಬೋಧನೆಗಾಗಿ ನಿಮಗೆ ಧನ್ಯವಾದಗಳು. ಸರ್ವಶಕ್ತನಾದ ದೇವರು ನಿಮ್ಮನ್ನು ಅನುಗ್ರಹಿಸುವುದನ್ನು ಮುಂದುವರಿಸಲಿ ಎಂದು ಹಾರೈಸುತ್ತೇನೆ. ನಂಬಿಕೆ ಬೆಟ್ಟವನ್ನು ಕದಲಿಸುತ್ತದೆ.

ಕ್ರಿಸ್ತರಲ್ಲಿ ನಿಮ್ಮ ಮಗಳಾದ,

ಟಿ.ಒ. ಕುಮಾಸಿ, ಘಾನ

---

ಪ್ರಿಯ ಪ್ಯಾಸ್ಟರ್,

ದೂರದ ಘಾನದಿಂದ ನಾನು ನಿಮಗೆ ಶುಭಾಶಯಗಳನ್ನು ಕಳುಹಿಸುತ್ತಿದ್ದೇನೆ. ಉದ್ಧಾರಕ (ದ ಮೆಸ್ಸಾಯ) ಎಂಬ ಹೆಸರಿನ ಸಾಹಿತ್ಯವನ್ನು ಸಂಪೂರ್ಣವಾಗಿ ಓದಿದ ನಂತರ ನಾನು ಕೊನೆಗೂ ಯೇಸು ಕ್ರಿಸ್ತರನ್ನು ನನ್ನ ವೈಯಕ್ತಿಕ ರಕ್ಷಕರನ್ನಾಗಿ ಸ್ವೀಕರಿಸಿದ್ದೇನೆಂದು ಮತ್ತು ಆತ ನನಗಾಗಿ ಬಂದು ಶಿಲುಬೆಯ ಮೇಲೆ ಸತ್ತರು ಎಂದು ಹೇಳಲು ನಾನು ಬಹಳ ಉತ್ಸಾಹದಿಂದಿದ್ದೇನೆ. ಹಿಂದೆ, ನಾನು ದೇವರನ್ನು ಅರಿಯದ ಲೋಕದಲ್ಲಿದ್ದೆ, ನನಗೆ ಆತನ ಮಗನಾದ ಉದ್ಧಾರಕರ ಬಗ್ಗೆಯೂ ತಿಳಿದಿರಲಿಲ್ಲ, ಆದರೆ ನಿಮ್ಮ ಸಾಹಿತ್ಯವನ್ನು ಓದಿದ ನಂತರ, ನಾನು ಕಳೆದುಹೋಗಿದ್ದೆ ಆದರೆ ಈಗ ನಾನು ಸಿಕ್ಕಿದ್ದೇನೆ, ನಾನು ಕತ್ತಲೆಯಲ್ಲಿದ್ದೆ, ಆದರೆ ಪ್ರಭು ದೇವರು ನನ್ನನ್ನು ಬೆಳಕಿಗೆ ತಂದಿದ್ದಾರೆ ಎಂದು ಈಗ ನನಗೆ ತಿಳಿದು ಬಂದಿದೆ. ಆದ್ದರಿಂದ ನಾನೊಬ್ಬ ಮರುಹುಟ್ಟು ಪಡೆದಿರುವ ಕ್ರೈಸ್ತಮತೀಯ, ಮತ್ತು ಜೀವಂತ ದೇವರ ಒಬ್ಬ ಮಗ. ಈಗ, ನನ್ನ ಬಳಿ ಬೈಬಲ್ ಇಲ್ಲ, ಮತ್ತು ಸಾಧ್ಯವಾದರೆ, ನನಗೆ ಒಂದನ್ನು ಕಳುಹಿಸಿ, ಅದರೊಂದಿಗೆ ನಿಮ್ಮ ಕಿರುಪುಸ್ತಕ, ಉದ್ಧಾರಕವನ್ನೂ (ದ ಮೆಸ್ಸಾಯ) ಕಳುಹಿಸಿ. ದೇವರನ್ನು ಚೆನ್ನಾಗಿ ತಿಳಿದುಕೊಳ್ಳಲು ನನಗೆ ನೆರವಾಗಬಲ್ಲ ಯಾವುದೇ ಇತರ ಪುಸ್ತಕಗಳನ್ನು ಕೂಡ ನೀವು ನನಗೆ ಕಳುಹಿಸಿದರೆ, ನಾನು ಅದನ್ನು ಮೆಚ್ಚುತ್ತೇನೆ. ನಾನು ಈಗ ಕೊಫೊರಿದು ಎಂಬಲ್ಲಿನ ಪೆಂಟೆಕೋಸ್ಟಲ್ ಚರ್ಚ್‌ಗೆ ಹೋಗುತ್ತಿದ್ದೇನೆ. ನೀವು ಮಾಡುತ್ತಿರುವ ಒಳ್ಳೆಯ ಕೆಲಸಗಳಿಗಾಗಿ ಪ್ರಭು ದೇವರು ನಿಮ್ಮನ್ನು ಸಮೃದ್ಧವಾಗಿ ಅನುಗ್ರಹಿಸಲಿ.

ಡಿ.ಎಫ್. ಕೊಫೊರಿದುಅ, ಘಾನ

# ಟೋನಿ ಅಲಾಮೊ ಅವರ ಸಾಕ್ಷ್ಯ

*(ಪುಟ 3 ರಿಂದ ಮುಂದುವರಿದಿದೆ)*

"ಆತನಲ್ಲಿ ಸಂಪೂರ್ಣವಾಗಿದ್ದೇವೆ"[29] ಎಂದು ಪ್ರತಿ ದಿನ ಹೆಚ್ಚು ಸಂಪೂರ್ಣವಾಗಿ ನನಗೆ ತಿಳಿಯುತ್ತಿದೆ. "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿನ ಪ್ರತಿ ಜೀವಿಗೂ ಸುವಾರ್ತೆಯನ್ನು ಸಾರಿರಿ"[30] (ಪ್ರತಿಯೊಂದು ಒಣಗಿದ ಎಲುಬಿಗೆ, ಆಧ್ಯಾತ್ಮಿಕವಾಗಿ ಸತ್ತಿರುವವರಿಗೆ, ಅವರು "ಯೆಹೋವನ ವಾಕ್ಯಗಳನ್ನು ಕೇಳಲು"[31] ಸಾಧ್ಯವಾಗುವಂತೆ ಉಪದೇಶ ಮಾಡಿ) ಎಂದು ಮೋಡದ ಮೇಲೆ ಸ್ವರ್ಗಕ್ಕೆ ಏರುವ ಕೆಲವು ಕ್ಷಣಗಳ ಮೊದಲು ಹೇಳಿದ ಯೇಸುವಿನ ಪ್ರತಿಯೊಂದು ಪದವನ್ನು ಅನುಸರಿಸುವುದು ಬಹಳ ಮುಖ್ಯ ಎಂದು ಕೂಡ ನನಗೆ ತಿಳಿದಿದೆ.

"ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು."[32]

ನೀವು ನನ್ನಂಥವರಾಗಿದ್ದರೆ ಮತ್ತು ರಕ್ಷಣೆ ಹೊಂದಬೇಕೆಂದಿದ್ದರೆ ಹಾಗೂ ದಂಡನೆಗೆ ಗುರಿಯಾಗದಿರಬೇಕೆಂದರೆ, ದೇವರಿಗೆ ಈ ಪ್ರಾರ್ಥನೆಯನ್ನು ಹೇಳಿರಿ:

**ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[33] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[34] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[35] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[36] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[37] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[38] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[39] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು, ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[40] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[41] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[42] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಮತ್ತು ಇನ್ನು ಮೇಲೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[43]**

ರಕ್ಷಣೆಯ ನಂತರ, ತಂದೆಯ, ಮಗನ, ಮತ್ತು ಪವಿತ್ರಾತ್ಮನ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಮಾಡಿದರು ಎಂದು ಹೇಳಲಾಗುತ್ತದೆ.[44] ಬೈಬಲ್ ಸೊಸೈಟಿ ಆಫ್ ಇಂಡಿಯಾದ "ಸತ್ಯವೇದವು" [KAN-OV-063/86-87/5M/X1017 A] [ಇಂಗ್ಲಿಷ್ ಕಿಂಗ್ ಜೇಮ್ಸ್ ಆವೃತ್ತಿ] ಬೈಬಲ್ ಅನ್ನು ಶ್ರದ್ಧೆಯಿಂದ ಓದಿ, ಮತ್ತು ಅದು ಹೇಳಿದ್ದನ್ನು ಮಾಡಿ.[45]

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ. ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ, ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೇವೆ ಎಂದು ಕೇಳುತ್ತೀರೋ? ದಶಮಾಂಶ, ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಮನೆಯಲ್ಲಿ [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಮಾಂಶವನ್ನು [ದಶಮಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವುದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**28** ರೋಮಾಪುರದವರಿಗೆ 8:37, 1 ಯೋಹಾನನು 4:3-4 **29** ಕೊಲೊಸ್ಸೆಯವರಿಗೆ 2:10 **30** ಮಾರ್ಕ 16:15, ಲೂಕ 14:23 **31** 2 ಅರಸುಗಳು 20:16, ಯೆಶಾಯ 1:10, ಯೆರೆಮೀಯ 2:4, ಯೆಹೆಜ್ಕೇಲನು 37:4 **32** ಮಾರ್ಕ 16:16, 2 ಥೆಸಲೋನಿಕದವರಿಗೆ 2:12 **33** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **34** ಮತ್ತಾಯ 26:63-64, 27:54, ಲೂಕ 1:30-33, ಯೋಹಾನನು 9:35-37, ರೋಮಾಪುರದವರಿಗೆ 1:3-4 **35** ಅಪೋಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನನು 1:7, ಪ್ರಕಟನೆ 5:9 **36** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನನು 2:19, 21, 10:17-18, 11:25, ಅಪೋಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **37** ಲೂಕ 22:69, ಅಪೋಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **38** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **39** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನನು 1:7, ಪ್ರಕಟನೆ 1:5, 7:14 **40** ಮತ್ತಾಯ 26:28, ಅಪೋಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ 1:7, ಕೊಲೊಸ್ಸೆಯವರಿಗೆ 1:14 **41** ಮತ್ತಾಯ 21:22, ಯೋಹಾನನು 6:35, 37-40, ರೋಮಾಪುರದವರಿಗೆ 10:13 **42** ಇಬ್ರಿಯರಿಗೆ 11:6 **43** ಯೋಹಾನನು 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **44** ಮತ್ತಾಯ 28:18-20, ಯೋಹಾನನು 3:5, ಅಪೋಸ್ತಲರ ಕೃತ್ಯಗಳು 2:38, 19:3-5 **45** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವ 1:8, 22:5, 2 ತಿಮೊಥೆಯನಿಗೆ 2:15, 3:14-17, ಯೂದನು 1:22-25, ಪ್ರಕಟನೆ 3:18

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**

**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: (661) 252-5686 • Fax (661) 252-4362**

**www.alamoministries.com • info@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ಆರಾಧನೆಗಳನ್ನು ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ರಾತ್ರಿ 8 ಗಂಟೆಗೆ ಮತ್ತು ಇತರ ತಾಣಗಳಲ್ಲಿ ಪ್ರತಿ ರಾತ್ರಿ ನಡೆಸಲಾಗುತ್ತದೆ.

ಮಾಹಿತಿಗಾಗಿ ದಯವಿಟ್ಟು (908) 937-5723 ಗೆ ಕರೆ ಮಾಡಿ. ಪ್ರತಿ ಆರಾಧನೆಯ ನಂತರ ಊಟೋಪಚಾರವಿರುತ್ತದೆ.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯದ ವಿತರಕರಾಗುವ ಮೂಲಕ ಆತ್ಮಗಳ ಕೊಯ್ಲಿನಲ್ಲಿ ಶ್ರಮಜೀವಿಯಾಗಿರಿ.*

*ನಮ್ಮ ಎಲ್ಲಾ ಸಾಹಿತ್ಯ ಮತ್ತು ಆಡಿಯೊ ಸಂದೇಶಗಳು, ಷಿಪಿಂಗ್ ಸೇರಿದಂತೆ ಶುಲ್ಕರಹಿತವಾಗಿವೆ. ಅವುಗಳಿಗಾಗಿ ನಿಮ್ಮಿಂದ ಯಾರಾದರೂ ಶುಲ್ಕ ಪಡೆಯಲು ಪ್ರಯತ್ನಿಸುತ್ತಿದ್ದರೆ, ದಯವಿಟ್ಟು (661) 252-5686 ಗೆ ಕಲೆಕ್ಟ್ ಕರೆ ಮಾಡಿ.*

ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೋಸ್ತಲರ ಕೃತ್ಯಗಳು 4:12).

ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.

ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:

© Copyright 1995, 2012, 2013, 2014 All rights reserved World Pastor Tony Alamo ®Registered 1995, 2012, 2013, 2014